ಸಂಪಾದಕ : ಶಿವಕುಮಾರ್ ಕೆ. ವರ್ಲಕೊಂಡ

PRGI : KNKAN/26/A2919
E-mail: skandagirivani@gmail.com

# ಸ್ಕಂದಗಿರಿ ವಾಣಿ

ಕನ್ನಡ ದಿನಪತ್ರಿಕೆ

₹2/-

Editor : SHIVAKUMAR. K.
M.: 81475 82389 / 9743641515

ಸತ್ಯದ ಧ್ವನಿ

SKANDAGIRI VANI Kannada Daily FRIDAY | October 09, 2026 | Volume 01 | Issue 84 | Pages 4 |

# ರೈತರ ಬೆನ್ನೆಲುಬಾದ ಡಿಸಿಸಿ ಬ್ಯಾಂಕ್ ಬಲಪಡಿಸಿ

## ಬಾಗೇಪಲ್ಲಿಯಲ್ಲಿ ನಡೆದ ರಾಜ್ಯ ಮಟ್ಟದ ವಿಶೇಷ ತರಬೇತಿ ಕಾರ್ಯಕ್ರಮದಲ್ಲಿ ಸುಬ್ಬಾರೆಡ್ಡಿ ಅಭಿಮತ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಭಾಗ್ಯನಗರ:** ನಾನು ಸೇರಿದಂತೆ 5 ಶಾಸಕರು ನಿರ್ದೇಶಕರಾಗಿರುವ ಸಂದರ್ಭದಲ್ಲಿ ಡಿಸಿಸಿ ಬ್ಯಾಂಕ್ ಅಭಿವೃದ್ಧಿ ಆಗಲಿಲ್ಲ ಎಂದರೆ ಭವಿಷ್ಯದಲ್ಲಿ ಮತ್ತೆಂದು ಅದು ಅಭಿವೃದ್ಧಿ ಕಾಣಲು ಸಾಧ್ಯವಿಲ್ಲ. ಬ್ಯಾಂಕನ್ನು ಸಂಕಷ್ಟದಿಂದ ಮೇಲೆ ತಂದು ಹಾಲಿ ನೀಡಿರುವ ಸಾಲ ಸೌಲಭ್ಯದ 4 ರಷ್ಟು ಹೆಚ್ಚಿನ ಸಾಲ ಸೌಲಭ್ಯವನ್ನು ಒದಗಿಸುವ ಖಚಿತ ಭರವಸೆ ಮತ್ತು ವಿಶ್ವಾಸವಿದೆ ಎಂದು ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ತಿಳಿಸಿದರು.

ಪಟ್ಟಣಕ್ಕೆ ಸಮೀಪದ ಕೋಮಲ್ ಗಾರ್ಡನ್ ಹೋಟೆಲ್ ಸಂಸ್ಕೃತಿ ಸಭಾಂಗಣದಲ್ಲಿ ಜಿಲ್ಲೆಯ ಎಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಕಂಪ್ಯೂಟರ್ ಆಪರೇಟರುಗಳಿಗೆ ರಾಜ್ಯ ಮಟ್ಟದ ವಿಶೇಷ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಆರ್ಥಿಕ ಅಶಿಸ್ತು ಮತ್ತು ಹಣ ದುರುಪಯೋಗದ ಕಾರಣ ಡಿಸಿಸಿ ಬ್ಯಾಂಕ್ ಇಂದು ಸಂಕಷ್ಟದಲ್ಲಿ. ರೈತರು, ಮಹಿಳೆಯರಿಗೆ ಸಾಲಸೌಲಭ್ಯ ಸಿಗದಂತಾಗಿದೆ. ಪ್ಯಾಕ್ಸ್‌ಗಳಲ್ಲಿ ರೈತರು ಮತ್ತು ಮಹಿಳೆಯರ ಹೆಸರಿನಲ್ಲಿ ಹಣ ದುರುಪಯೋಗಪಡಿಸಿಕೊಳ್ಳಲಾಗಿದೆ. ಸಹಕಾರಿ ಕ್ಷೇತ್ರ ತಾಯಿ ಇದ್ದಂತೆ. ಕಷ್ಟ ಬರುವ ರೈತನಿಗೆ ನೆರವಾಗೋದು ಸಹಕಾರಿ ಕ್ಷೇತ್ರ. ನಿಯತ್ತಾಗಿ




ಬ್ಯಾಂಕಿನಲ್ಲಿ ವ್ಯವಹರಿಸಿದರೆ ಇದಕ್ಕಿಂತ ಉತ್ತಮ ಮತ್ತ್ಯಾವುದೂ ಇಲ್ಲ. ವಾಣಿಜ್ಯ ಬ್ಯಾಂಕುಗಳು ಅವುಗಳ ಲಾಭದತ್ತ ಯೋಚಿಸುತ್ತವೆಯೇ ಹೊರತು ರೈತರ ಬಗ್ಗೆ ಎಂದಿಗೂ ಯೋಚಿಸುವುದಿಲ್ಲ. ಕಾಳಜಿ ಇರುವುದಿಲ್ಲ. ಸಹಕಾರಿ ಬ್ಯಾಂಕುಗಳು ಲಾಭದಲ್ಲಿ ಉತ್ತಮವಾಗಿ ನಡೆದರೆ ರಾಜರಂತೆ ಇರಬಹುದು. ಡಿಸಿಸಿ ಬ್ಯಾಂಕಿನಲ್ಲಿ ನಡೆದಿರುವ ನ್ಯೂನತೆಗಳನ್ನು ಸರಿಪಡಿಸಬೇಕು. ಭ್ರಷ್ಟ ವ್ಯವಸ್ಥೆಗೆ ಕಡಿವಾಣ ಆಗಬೇಕು. ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ಕೋಲಾರ ಶಾಸಕ ಜಿ.ಮಂಜುನಾಥ್ ರವರಿಗೆ ಬ್ಯಾಂಕ್ ಅಭಿವೃದ್ಧಿಪಡಿಸುವ ಬಗ್ಗೆ ಕಾಳಜಿ ಇದೆ. ಜೊತೆಯಲ್ಲಿ 4 ಶಾಸಕರಿದ್ದೇವೆ, ಉತ್ಸಾಹಿ ನಿರ್ದೇಶಕರು ಆಯ್ಕೆಯಾಗಿದ್ದಾರೆ. ಖಂಡಿತ ಡಿಸಿಸಿ ಬ್ಯಾಂಕ್ ತನ್ನ ವೈಭವವನ್ನು ಪಡೆದುಕೊಳ್ಳುತ್ತದೆ ಎಂದರು.

ಅಧ್ಯಕ್ಷತೆಯನ್ನು ವಹಿಸಿದ್ದ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಹಾಗು ಕೋಲಾರ ಶಾಸಕ ಜಿ.ಮಂಜುನಾಥ್ ಮಾತನಾಡಿ, ಬಹುತೇಕ ಪ್ಯಾಕ್ಸ್‌ಗಳು ಪಡೆದಿರುವ ಸಾಲವನ್ನು ಮರುಪಾವತಿ ನೀಡದೆ ತಾತ್ಸಾರ ಮನೋಬಾವನೆ ತಾಳುತ್ತಿದ್ದಾರೆ. ಈ ನಿರ್ಲಕ್ಷ್ಯ ಮನೋಭಾವನೆ ಸರಿಯಲ್ಲ ಹಿಂದಿನ ಆಡಳಿತ ಏನು ಮಾಡಿದೆ ಎಂಬುದನ್ನು ನಾನು ಹೇಳಲು ಹೋಗಲ್ಲ ಆದರೆ ಪಡೆದ ಸಾಲವನ್ನು ಮರುಪಾವತಿ ಮಾಡಲೇಬೇಕು ಇಲ್ಲವಾದರೆ ಕಾನೂನು ಕ್ರಮಕ್ಕೆ ಗುರಿಯಾಗುತ್ತೀರಿ ಎಂದು ಎಚ್ಚರಿಕೆ ನೀಡಿದರು.

ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಅಥವಾ ಖಾಸಗಿ ಹಣಕಾಸಿನ ಸಂಸ್ಥೆಗಳಲ್ಲಿ ಸಾಲ ಸೌಲಭ್ಯ ಪಡೆದರೆ ಅವರು ರೈತರ ರಕ್ತವನ್ನು ಹೀರಿ ಹಿಪ್ಪು ಮಾಡುತ್ತಾರೆ ಅದೂ ಸಾಲದೆಂಬಂತೆ ಖಾಸಗಿ ಹಣಕಾಸಿನ ಸಂಸ್ಥೆಗಳಲ್ಲಿ ಸಾಲ ಪಡೆದರೆ ರೈತರನ್ನು ಮುಗಿಸುವವರೆಗೂ ಬಿಡಲ್ಲ ಆದ್ದರಿಂದ ಡಿಸಿಸಿ ಬ್ಯಾಂಕ್ ಇರೋದೆ ರೈತರಿಗಾಗಿ ಈ ಬ್ಯಾಂಕ್ ನಮ್ಮ ತಾಯಿ ಇದ್ದಂತೆ ನಮ್ಮ ತಾಯಿಯನ್ನು ಕಾಪಾಡುವುದು, ಉಳಿಸಿ ಬೆಳೆಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ ರೈತರ ದೈನಂದಿನ ಬದುಕಿನ ಯೋಗಕ್ಷೇಮವನ್ನು ಕಾಪಾಡುವುದು ಸಹಕಾರಿ ಕ್ರೇತ್ರವೇ ಹೊರತು ಯಾವುದೇ ಖಾಸಗಿ ಹಣಕಾಸಿನ

ಸಂಸ್ಥೆಗಳಿಂದ ಕಾಪಾಡಲು ಸಾಧ್ಯವಿಲ್ಲ. ರೈತರಿಗಾಗಿ ಇರುವ ಡಿಸಿಸಿ ಬ್ಯಾಂಕನ್ನು ಮೇಲೆತ್ತಲು ನಾವೆಲ್ಲಾ ಶ್ರಮ ಪಡಲು ಸಿದ್ದರಿದ್ದೇವೆ ಎಂದರು.

ವಿಧಾನಪರಿಷತ್ ಸದಸ್ಯ ಎಂ.ಎಲ್.ಅನಿಲ್ ಕುಮಾರ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಮೋಹನರೆಡ್ಡಿ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಉಪಾಧ್ಯಕ್ಷ ಬಿ.ಕೆ.ಶಿವಕುಮಾರ್, ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಒಕ್ಕೂಟ. ನಿ ಅಧ್ಯಕ್ಷ ಹೆಚ್.ವಿ.ನಾಗರಾಜ್, ನಿರ್ದೇಶಕರಾದ ಚನ್ನಬೈರೇಗೌಡ, ಕೆ.ಸುನಿಲ್, ಹನುಮೇಗೌಡ, ಎ.ನಾಗರಾಜ್, ಹೆಚ್.ಎನ್. ಮಂಜುನಾಥರೆಡ್ಡಿ, ಕೆ.ಎನ್.ವೆಂಕಟರಾಮರೆಡ್ಡಿ, ಕೆ.ವಿ.ಭಾಸ್ಕರರೆಡ್ಡಿ, ಸಿಇಓ ಎನ್.ವೆಂಕಟೇಶ್, ಕೆ.ಎನ್.ನಾಗರಾಜ್, ಶಿವಕುಮಾರ್, ಮಲ್ಲಯ್ಯಶೆಟ್ಟಿ, ಉತ್ತಿರೆಡ್ಡಿ, ಪಿ.ಎನ್.ವೇಣುಗೋಪಾಲ, ಸಿ.ಶಿವಪ್ಪ, ಶ್ರೀಮತಿ ಅಮೃತ ಬಿಸನಾಳ, ಬಿ.ವಿ.ಪ್ರದೀಪ್ ಮತ್ತಿತರರು ಉಪಸ್ತಿತರಿದ್ದರು.

## ಮಧ್ಯರಾತ್ರಿ ಬೆಂಕಿಯ ಕೆನ್ನಾಲಿಗೆ ಟೆಂಪೋ 300ಕ್ಕೂ ಅಧಿಕ ಟೊಮ್ಯಾಟೊ ಕ್ರೇಟ್‌ಗಳು ಭಸ್ಮ



**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಂತಾಮಣಿ:** ನಗರದ ಎಪಿಎಂಸಿ ಟೊಮೇಟೊ ಮಾರುಕಟ್ಟೆ ಬಳಿಯ ಊಲವಾಡಿ ರಸ್ತೆಯಲ್ಲಿರುವ ವಿ.ಕೆ. ಕನ್ವೆನ್ಷನ್ ಹಾಲ್‌ನ ಕಾಂಪೌಂಡ್‌ನಲ್ಲಿ ನಿಲ್ಲಿಸಿದ್ದ 407 ಟೆಂಪೋಗೆ ಬುಧವಾರ ಮಧ್ಯರಾತ್ರಿ ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡು ಟೆಂಪೋ ಹಾಗೂ ಟೆಂಪೋದಲ್ಲಿದ್ದ 300ಕ್ಕೂ ಹೆಚ್ಚು ಟೊಮೇಟೊ ಕ್ರೇಟ್‌ಗಳು ಹಾಗೂ ಪಕ್ಕದಲ್ಲಿರಿಸಿದ್ದ 150ಕ್ಕೂ ಹೆಚ್ಚು ಖಾಲಿ ಪ್ಲಾಸ್ಟಿಕ್ ಕ್ರೇಟ್‌ಗಳು ಸಂಪೂರ್ಣವಾಗಿ ಸುಟ್ಟು ಕರಕಲಾಗಿ ಲಕ್ಷಾಂತರ ರೂಗಳು ನಷ್ಟವಾಗಿರುವ ಘಟನೆ ನಡೆದಿದೆ.

ಬುಧವಾರ ಮಧ್ಯ ರಾತ್ರಿ ಸುಮಾರು 12 ಗಂಟೆ ಸಮಯದಲ್ಲಿ ಟೆಂಪೋಗೆ ಬೆಂಕಿ ಹೊತ್ತಿಕೊಂಡಿದ್ದು, ಬೆಂಕಿಯ ಜ್ವಾಲೆ ಕಾಣಿಸಿಕೊಂಡಿದೆ, ಕೂಡಲೇ ಸ್ಥಳೀಯರು ಸಮೀಪದ ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದ್ದಾರೆ. ತಕ್ಷಣ ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಜಯನಾಯಕ್ ರವರ ನೇತೃತ್ವದ ತಂಡ ತುರ್ತು ಕಾರ್ಯಾಚರಣೆ ನಡೆಸಿ ಉರಿಯುತ್ತಿದ್ದ ಬೆಂಕಿ ಯನ್ನು ನಂದಿಸುವ ಮೂಲಕ ಬೆಂಕಿ ಅವಘಡ ಮತ್ತಷ್ಟು ಹೆಚ್ಚಾಗದಂತೆ ತಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಆದರೆ ಅಷ್ಟರಲ್ಲಾಗಲೇ ಬೆಂಕಿ ಟೆಂಪೋವನ್ನು ಸಂಪೂರ್ಣವಾಗಿ ಆವರಿಸಿದ್ದರಿಂದ ಟೆಂಪೋ ಹಾಗೂ ಅದರಲ್ಲಿದ್ದ 300ಕ್ಕೂ ಹೆಚ್ಚು ಟೊಮೇಟೊ ಕ್ರೇಟ್‌ಗಳು ಹಾಗೂ ಪಕ್ಕದಲ್ಲಿರಿಸಿದ್ದ 150ಕ್ಕೂ ಹೆಚ್ಚು ಕಾಲಿ ಟೊಮೆಟೋ ಕ್ರೇಟುಗಳು ಸುಟ್ಟು ಭಸ್ಮವಾಗಿವೆ. ಬೆಂಕಿ ಅವಘಡಕ್ಕೆ ನಿಖರ ಕಾರಣಕ್ಕಾಗಿ ಸಿಸಿ ಕ್ಯಾಮರಾ ಪರಿಶೀಲನೆ ನಡೆಸಿದ್ದಾರೆ, ಇನ್ನು ಅವಘಡಕ್ಕೆ ಟೆಂಪೋದಲ್ಲಿ ಬ್ಯಾಟರಿ ಶಾರ್ಟ ಸರ್ಕ್ಯೂಟ್ ಕಾರಣ ಎನ್ನಲಾಗಿದೆ.

## ಭೀಕರ ರಸ್ತೆ ಅಪಘಾತ ಒಬ್ಬರು ಸಾವು ಮೂವರಿಗೆ ಗಂಭೀರ ಗಾಯ



**ಸ್ಕಂದಗಿರಿ ವಾಣಿ ಸುದ್ದಿಜಾಲ**

**ತುಗ್ಗಲಿ:** ಕರ್ನೂಲ್ ಜಿಲ್ಲೆಯ ತುಗ್ಗಲಿ ಮಂಡಲದ ರಾತನ ಗ್ರಾಮದ ಸಮೀಪ ಗುರುವಾರ ಭೀಕರ ರಸ್ತೆ ಅಪಘಾತ ಸಂಭವಿಸಿದೆ. ಚಿಕ್ಕಬಳ್ಳಾಪುರದಿಂದ ಮಂತ್ರಾಲಯಕ್ಕೆ ಹೋಗುತ್ತಿದ್ದ ಕಾರಿಗೆ ಲಾರಿ ಡಿಕ್ಕಿ ಹೊಡೆದಿದೆ. ಈ ಅಪಘಾತದಲ್ಲಿ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಒಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದು, ಇನ್ನೂ ಮೂವರಿಗೆ ಗಂಭೀರ ಗಾಯಗಳಾಗಿವೆ. ಗಾಯಗೊಂಡವರಲ್ಲಿ ಒಬ್ಬರ ಸ್ಥಿತಿ ಚಿಂತಾಜನಕವಾಗಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಕರ್ನೂಲ್‌ಗೆ ರವಾನಿಸಲಾಗಿದೆ. ಮಾಹಿತಿ ತಿಳಿದ ತಕ್ಷಣ ಪೊಲೀಸರು ಸ್ಥಳಕ್ಕೆ ಆಗಮಿಸಿ ರಕ್ಷಣಾ ಕಾರ್ಯ ಕೈಗೊಂಡರು. ಅಪಘಾತದ ಕಾರಣಗಳ ಬಗ್ಗೆ ತನಿಖೆ ನಡೆಸುತ್ತಿದ್ದಾರೆ. ಮೃತರು ಮತ್ತು ಗಾಯಗೊಂಡವರ ಸಂಪೂರ್ಣ ವಿವರಗಳು ತಿಳಿದುಬರಬೇಕಿದೆ.

# ಚಿಂತಾಮಣಿಯಲ್ಲಿ ಅದ್ದೂರಿ ದಸರಾ ಉತ್ಸವಕ್ಕೆ ಸಿದ್ಧತೆ

## ಜಾತಿ ಪಕ್ಷ ಭೇದವಿಲ್ಲದೆ ಎಲ್ಲರಿಗೂ ಮುಕ್ತ ಆಹ್ವಾನ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಂತಾಮಣಿ:** ಸಾಮೂಹಿಕ ಗಣೇಶೋತ್ಸವ, ಗಂಗಾ ಆರತಿ ಹಾಗೂ ಹಿಂದೂ ಸಮಾಜೋತ್ಸವದ ಮೂಲಕ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿಕೊಂಡು ಬರುತ್ತಿರುವ ಚಿಂತಾಮಣಿಯಲ್ಲಿ, ಈ ಬಾರಿ ದಸರಾ ಹಬ್ಬವನ್ನು ಅದ್ದೂರಿಯಾಗಿ ಆಚರಿಸಲಾಗುತ್ತಿದೆ ಎಂದು ಸತ್ಯನಾರಾಯಣ ಮಹೇಶ್ ರವರು ತಿಳಿಸಿದ್ದಾರೆ.

ಚಿಂತಾಮಣಿ ನಗರದ ಪಾಲಿಟೇಕ್ನೀಕ್ ಮೈದಾನದಲ್ಲಿ ಹಮಿಕೊಂಡಿದ್ದ ಪತ್ರಿಕಾಗೋಷ್ಟಿಯಲ್ಲಿ ಮಾತನಾಡಿದ ಅವರು ವಸುದೈವ ಕುಟುಂಬಕಂ, ಸರ್ವೇ ಜನಾಃ ಸುಖಿನೋ ಭವಂತು ಎಂಬ ಸಂದೇಶದೊಂದಿಗೆ ಜಾತಿ, ಪಕ್ಷ ಹಾಗೂ ವಯಸ್ಸಿನ ಯಾವುದೇ ಭೇದವಿಲ್ಲದೆ ಭಾರತ ಮಾತೆಯ ಪರವಾಗಿ ನಿಲ್ಲುವ ಎಲ್ಲರೂ ಈ ದಸರಾ ಉತ್ಸವದಲ್ಲಿ ಭಾಗವಹಿಸಬಹುದು ಎಂದು ಆಯೋಜಕರು ತಿಳಿಸಿದ್ದಾರೆ.

ಅಕ್ಟೋಬರ್ 11ರಂದು ಸಂಜೆ 6 ಗಂಟೆಗೆ ದಸರಾ ಉತ್ಸವಕ್ಕೆ ಅಧಿಕೃತ ಚಾಲನೆ ದೊರೆಯಲಿದೆ. ಒಟ್ಟು 9 ದಿನಗಳ ಕಾಲ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಂಗೀತ ಕಾರ್ಯಕ್ರಮಗಳನ್ನು ಇಮ್ಮಿಕೊಳ್ಳಲಾಗಿದೆ. ಪ್ರತಿದಿನ ಹೋಮ ಹವನ, ವಿಶೇಷ ಪೂಜಾ ಕಾರ್ಯಕ್ರಮಗಳು ನಡೆಯಲಿದ್ದು, ಇತ್ತೀಚಿನ ದಿನಗಳಲ್ಲಿ ಸಂಭವಿಸುತ್ತಿರುವ ಅಪಘಾತಗಳು ಹಾಗೂ ಅಹಿತಕರ ಘಟನೆಗಳ ಹಿನ್ನೆಲೆಯಲ್ಲಿ ಮೃತ್ಯುಂಜಯ ಹೋಮ ಸೇರಿದಂತೆ



ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ದಂಪತಿಗಳ ಸಮೇತ ಭಕ್ತರು ಭಾಗವಹಿಸಲು ಅವಕಾಶವಿದ್ದು, ಯಾವುದೇ ಜಾತಿ ನಿರ್ಭಂಧ ಇರುವುದಿಲ್ಲ ಎಂದು ಆಯೋಜಕರು ಹೇಳಿದ್ದಾರೆ.

ನವರಾತ್ರಿ ಉತ್ಸವದ ಅಂಗವಾಗಿ ಪ್ರತಿದಿನ ರಾತ್ರಿ ಸಂಗೀತ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು, ಮಹಿಳೆಯರಿಗಾಗಿ ಲಲಿತಾ ಸಹಸ್ರನಾಮ ಪಠಣ, ರಾತ್ರಿ ಕೊನೆಯಲ್ಲಿ ದೀಪಾರಾಧನೆ ನಡೆಯಲಿದೆ. ಇದರ ಜೊತೆಗೆ ದಾಂಡಿಯಾ ಹಾಗೂ ಲೇಸರ್ ಶೋ ಕೂಡ ಆಯೋಜಿಸಲಾಗಿದೆ.

ಗಣೇಶ ಚತುರ್ಥಿ ಸಂದರ್ಭದಲ್ಲಿ ಚಿಂತಾಮಣಿ ನಗರದಲ್ಲಿ ಗಣೇಶ ಪ್ರತಿಷ್ಠಾಪಿಸಿದ್ದ ವಿವಿಧ ಸಂಘಟನೆಗಳ ಪ್ರತಿನಿಧಿಗಳು ಪ್ರತಿದಿನ ಒಬ್ಬೊಬ್ಬರಂತೆ ವಾಲೆಂಟಿಯರ್ ಆಗಿ ಸೇವೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಲಾಗಿದೆ.

ವಿಶೇಷ ಆಕರ್ಷಣೆಯಾಗಿ ವಾರಾಣಸಿಯಿಂದ ಗಣೇಶ, ದುರ್ಗಾದೇವಿ ಹಾಗೂ ನರಸಿಂಹಸ್ವಾಮಿ ಸೇರಿದಂತೆ ಮೂರು ವಿಗ್ರಹಗಳನ್ನು ತರಿಸಿ ಪ್ರತಿಷ್ಠಾಪಿಸಲಾಗುವುದು. ಮಾತಾ ಭಾರತಿ ಮಂಗಳಂ ಎಂಬ ಹೆಸರಿನಲ್ಲಿ ವಿಶೇಷ ಮಂಟಪ ನಿರ್ಮಿಸಲಾಗುತ್ತಿದೆ.

ಈ ದಸರಾ ಉತ್ಸವದಲ್ಲಿ ಶಾಸಕ ಡಾ.ಎಂ.ಸಿ.ಸುಧಾಕರ್, ಮಾಜಿ ಶಾಸಕ ಜೆ.ಕೆ. ಕೃಷ್ಣಾರೆಡ್ಡಿ, ಬಿಜೆಪಿ ಮುಖಂಡ ದೇವನಹಳ್ಳಿ ವೇಣುಗೋಪಾಲ್ ಸೇರಿದಂತೆ ವಿವಿಧ ಪಕ್ಷಗಳ ಮುಖಂಡರು ಪಕ್ಷಾತೀತವಾಗಿ ಹಾಗೂ ಜಾತ್ಯತೀತವಾಗಿ ಭಾಗವಹಿಸಲಿದ್ದಾರೆ ಎಂದು ಬಿಜೆಪಿ ಮುಖಂಡ ಸತ್ಯನಾರಾಯಣ ಮಹೇಶ್ ತಿಳಿಸಿದ್ದಾರೆ.

ಚಿಂತಾಮಣಿಯಲ್ಲಿ ಪ್ರಪ್ರಥಮ ಬಾರಿಗೆ ಈ ರೀತಿಯ ಅದ್ದೂರಿ ದಸರಾ ಉತ್ಸವವನ್ನು ಆಯೋಜಿಸಲಾಗುತ್ತಿದ್ದು, ತಾಲ್ಲೂಕಿನ ಯುವಕ ಯುವತಿಯರು ಸೇರಿದಂತೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಕಣ್ತುಂಬಿಕೊಳ್ಳುವಂತೆ ಅವರು ಮನವಿ ಮಾಡಿದ್ದಾರೆ.

ಇನ್ನು ದಸರಾ ವಿಸರ್ಜನಾ ದಿನದಂದು ಚಿಂತಾಮಣಿ ನಗರದಲ್ಲಿ ಸ್ವಯಂ ಘೋಷಿತ ಬಂದ್ ಆಚರಿಸುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಲಾಗಿದೆ.

ಈ ಕುರಿತು ಮಾತನಾಡಿದ ಗೋಪಿ, ನವರಾತ್ರಿ ಉತ್ಸವವನ್ನು ನಮ್ಮೂರಿನ ಹಬ್ಬ, ನಮ್ಮ ಮನೆಯ ಹಬ್ಬದ ವಾತಾವರಣದಲ್ಲಿ ಆಚರಿಸಬೇಕು. ಇದು ಯಾವುದೇ ಆಡಂಬರ ಅಥವಾ ತೋರಿಕೆಗಾಗಿ ನಡೆಸುತ್ತಿರುವ ಕಾರ್ಯಕ್ರಮವಲ್ಲ.

ನಾವೆಲ್ಲರೂ ಒಂದು ಎಂಬ ಸಂದೇಶವನ್ನು ಸಾರುವುದೇ ಈ ಉತ್ಸವದ ಪ್ರಮುಖ ಉದ್ದೇಶ ಎಂದು ತಿಳಿಸಿದರು.

ಉತ್ಸವದ ಅಂಗವಾಗಿ ಸರಿಗಮಪ ಕಾರ್ಯಕ್ರಮ ಸೇರಿದಂತೆ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಮುಂದಿನ ದಿನಗಳಲ್ಲಿ ದೀಪಾವಳಿಯನ್ನೂ ಸಾಮೂಹಿಕವಾಗಿ ಆಚರಿಸುವ ಉದ್ದೇಶ ಹೊಂದಲಾಗಿದೆ ಎಂದು ಹೇಳಿದರು.

ಒಟ್ಟಿನಲ್ಲಿ ಧಾರ್ಮಿಕ ಭಕ್ತಿ, ಸಾಂಸ್ಕೃತಿಕ ವೈಭವ ಹಾಗೂ ಸಾಮಾಜಿಕ ಒಗ್ಗಟ್ಟಿನ ಸಂದೇಶದೊಂದಿಗೆ ಚಿಂತಾಮಣಿಯಲ್ಲಿ ನಡೆಯಲಿರುವ 9 ದಿನಗಳ ದಸರಾ ಉತ್ಸವಕ್ಕೆ ಭರ್ಜರಿ ಸಿದ್ಧತೆ ನಡೆಯುತ್ತಿದೆ.

ಈ ಸಂದರ್ಭದಲ್ಲಿ ಎಲ್ಲಾ ಮುಖಂಡರು, ಸಾರ್ವಜನಿಕರು ಮತಿತ್ತರರು ಉಪಸ್ಥಿತಿರಿದ್ದರು.

# ವರ್ಷಗಳು ಕಳೆದರೂ ಮುಗಿಯದ ನಿವಾಸಿಗಳ ತೊಂದರೆ

## ಪ್ರಾಣ ಕೈಯಲ್ಲಿ ಹಿಡಿದು ಸಂಚರಿಸುವ ಸ್ಥಿತಿಯಲ್ಲಿ ಶೆಟ್ಟಹಳ್ಳಿ ಗ್ರಾಮಸ್ಥರು

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಂತಾಮಣಿ:** ವರ್ಷಗಳು ಉರುಳಿದರೂ, ಸರ್ಕಾರಗಳು ಹಾಗೂ ಜನಪ್ರತಿನಿಧಿಗಳು ಬದಲಾದರೂ ಆ ಹಳ್ಳಿಯ ಜನರ ಭವಿಷ್ಯ ಮತ್ತು ಭಾಗ್ಯ ಮಾತ್ರ ಬದಲಾಗಿಲ್ಲ. ಇಡೀ ಪಂಚಾಯಿತಿ ವ್ಯಾಪ್ತಿಗೆ ಕೇಂದ್ರ ಬಿಂದುವಾಗಿರುವ ಊರಿಗೇ ಸೂಕ್ತ ರಸೆ ್ತ ಸಂಪರ್ಕವಿಲ್ಲದೆ, ಗ್ರಾಮಸ್ಥರು ನಿತ್ಯ ನರಕಯಾತನೆ ಅನುಭವಿಸುವಂತಾಗಿದೆ. ಅನಾರೋಗ್ಯ ಪೀಡಿತರು, ಗರ್ಭಿಣಿಯರು ಹಾಗೂ ಶಾಲಾ ಮಕ್ಕಳು ಪ್ರತಿದಿನ ಪ್ರಾಣವನ್ನು ಪಣಕ್ಕಿಟ್ಟು ಸಂಚರಿಸಬೇಕಾದ ಭೀಕರ ವಾತಾವರಣ ನಿರ್ಮಾಣವಾಗಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲೂಕಿನ ಅಂಬಾಜಿದುರ್ಗ ಹೋಬಳಿಗೆ ಒಳಪಡುವ ಶೆಟ್ಟಹಳ್ಳಿ ಗ್ರಾಮ ಪಂಚಾಯಿತಿಯ ದುಸ್ಥಿತಿ ಇದಾಗಿದೆ. ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸುಮಾರು 6,500ಕ್ಕೂ ಹೆಚ್ಚು ಜನಸಂಖ್ಯೆ ವಾಸಿಸುತ್ತಿದೆ. ಸಾರ್ವಜನಿಕರ ಅನುಕೂಲಕ್ಕಾಗಿ ಅತ್ಯಂತ ಪ್ರಮುಖವಾದ ಸಾರ್ವಜನಿಕ ಆಸ್ಪತ್ರೆ, ಗ್ರಾಮ ಪಂಚಾಯಿತಿ ಕಚೇರಿ, ಅಂಚೆ ಕಚೇರಿ ಸೇರಿದಂತೆ ಹಲವು ಮುಖ್ಯ ಸರ್ಕಾರಿ ಸಂಸ್ಥೆಗಳು ಇದೇ ಶೆಟ್ಟಹಳ್ಳಿಯಲ್ಲಿ ಕಾರ್ಯಾಚರಿಸುತ್ತಿವೆ. ಆದರೆ, ಇಡೀ ಹೋಬಳಿಗೆ ಸಂಪರ್ಕ ಕಲ್ಪಿಸುವ ಈ ಪ್ರಮುಖ ಕೇಂದ್ರಕ್ಕೇ ಸರಿಯಾದ ರಸ್ತೆ ಇಲ್ಲದಿರುವುದು ವಿಪರ್ಯಾಸದ



ಸಂಗತಿಯಾಗಿದೆ.

ಊರಿಗೆ ಸಂಪರ್ಕ ಕಲ್ಪಿಸುವ ಎರಡು ಮುಖ್ಯ ರಸ್ತೆಗಳೂ ಇಂಚಿಂಚಿಗೂ ದೊಡ್ಡ ದೊಡ್ಡ ಗುಂಡಿಗಳಿಂದ ತುಂಬಿಹೋಗಿವೆ. ರಸ್ತೆಯಲ್ಲಿ ಗುಂಡಿಯಿದೆಯೋ ಅಥವಾ ಗುಂಡಿಯಲ್ಲೇ ರಸ್ತೆಯಿದೆಯೋ ತಿಳಿಯದಂತೆ ಮಾರ್ಗ ಸಂಪೂರ್ಣವಾಗಿ ಹಾನಿಗೊಳಗಾಗಿದೆ. ಪ್ರತಿದಿನ ನೂರಾರು ದ್ವಿಚಕ್ರ ವಾಹನಗಳು, ಶಾಲಾ ಬಸ್‌ಗಳು ಹಾಗೂ ಆಂಬ್ಯುಲೆನ್ಸ್‌ಗಳು ಇದೇ ರಸ್ತೆಯಲ್ಲಿ ಸಾವು–ಬದುಕಿನ ನಡುವೆ ಹೋರಾಟ ನಡೆಸುತ್ತಾ ಸಂಚರಿಸಬೇಕಾಗಿದೆ.

ವಿಶೇಷವಾಗಿ ರಾತ್ರಿ ವೇಳೆ ಹಾಗೂ ಮಳೆಗಾಲದಲ್ಲಂತೂ ಈ ರಸ್ತೆಯಲ್ಲಿ ಪ್ರಯಾಣಿಸುವುದು ಸಾಕ್ಷಾತ್ ಯಮನ ಬಾಗಿಲಿಗೆ ತೆರಳಿದಂತೆ ಎಂದು ನಿವಾಸಿಗಳು ಅಳಲು ತೋಡಿಕೊಂಡಿದ್ದಾರೆ. ರಸ್ತೆಯ ಅಧ್ವಾನದಿಂದಾಗಿ ಸಣ್ಣಪುಟ್ಟ ಅಪಘಾತಗಳು ನಿರಂತರವಾಗಿ ಸಂಭವಿಸುತ್ತಿದ್ದು, ವಾಹನ ಸವಾರರು ತೀವ್ರ ಗಾಯಗೊಳ್ಳುತ್ತಿದ್ದಾರೆ. ಸ್ಥಳೀಯ ಶಾಸಕರಿಗೆ ಹಾಗೂ ಸಂಬಂಧಪಟ್ಟ ತಾಲೂಕು ಆಡಳಿತಾಧಿಕಾರಿಗಳಿಗೆ ಸಾರ್ವಜನಿಕರು ಹತ್ತಾರು ಬಾರಿ ಮನವಿ ಪತ್ರ ನೀಡಿ ತಮ್ಮ ಕಷ್ಟಗಳನ್ನು ತೋಡಿಕೊಂಡಿದ್ದಾರೆ. ಆದರೆ, ಚುನಾವಣೆ ಬಂದಾಗ ಮಾತ್ರ ಮತ ಕೇಳಲು ಬರುವ ಜನಪ್ರತಿನಿಧಿಗಳು, ಗೆದ್ದ ಮೇಲೆ ಈ ಹಳ್ಳಿಯತ್ತ ತಿರುಗಿಯೂ ನೋಡುತ್ತಿಲ್ಲ ಎಂದು ಗ್ರಾಮಸ್ಥರು ತೀವ್ರ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಅಧಿಕಾರಿಗಳ ಉದಾಶೀನತೆ ಹಾಗೂ ನಿರ್ಲಕ್ಷ್ಯದಿಂದಾಗಿ ಸಾವಿರಾರು ಜನರು ನಿತ್ಯ ಸಂಕಷ್ಟ ಎದುರಿಸುತ್ತಿದ್ದಾರೆ. ನಮ್ಮ ಊರಿನಲ್ಲಿ ಆಸ್ಪತ್ರೆ ಇದೆ, ಪಂಚಾಯಿತಿ ಇದೆ. ಪ್ರತಿದಿನ ಸಾವಿರಾರು ಜನರು ವಿವಿಧ ಕೆಲಸ ಕಾರ್ಯಗಳಿಗಾಗಿ ಬಂದು ಹೋಗುತ್ತಾರೆ.

ಆದರೆ ಬರುವುದಕ್ಕೆ ಸೂಕ್ತ ರಸ್ತೆಯೇ ಇಲ್ಲ. ತುರ್ತು ಸಂದರ್ಭದಲ್ಲಿ ಆಂಬ್ಯುಲೆನ್ಸ್ ಕೂಡ ಬಾರದಂತ ದುಸ್ಥಿತಿ ನಿರ್ಮಾಣವಾಗಿದೆ. ಶಾಸಕರಿಗೆ ಹಾಗೂ ಅಧಿಕಾರಿಗಳಿಗೆ ಎಷ್ಟೇ ಹೇಳಿದರೂ ಪ್ರಯೋಜನವಾಗಿಲ್ಲ. ತಕ್ಷಣವೇ ರಸ್ತೆ ಸರಿಪಡಿಸದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಕೈಗೊಳ್ಳುತ್ತೇವೆ ಎಂದು ಶೆಟ್ಟಿಹಳ್ಳಿ ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

ಇನ್ನಾದರೂ ಸಂಬಂಧಪಟ್ಟ ಶಾಸಕರು ಹಾಗೂ ತಾಲೂಕು ಆಡಳಿತ ತಕ್ಷಣ ಎಚ್ಚೆತ್ತುಕೊಳ್ಳಬೇಕಿದೆ. ಯಾವುದಾದರೂ ದೊಡ್ಡ ಅನಾಹುತ ಅಥವಾ ಪ್ರಾಣಹಾನಿ ಸಂಭವಿಸುವ ಮುನ್ನವೇ ಈ ಎರಡು ಮುಖ್ಯ ರಸ್ತೆಗಳನ್ನು ಗಟ್ಟಿಯಾಗಿ, ವೈಜ್ಞಾನಿಕವಾಗಿ ಮರುನಿರ್ಮಾಣ ಮಾಡಲು ಕ್ರಮ ಕೈಗೊಳ್ಳಬೇಕಿದೆ. ಪ್ರಾಣ ಕೈಯಲ್ಲಿ ಹಿಡಿದು ಸಂಚರಿಸುತ್ತಿರುವ ಶೆಟ್ಟಹಳ್ಳಿ ನಿವಾಸಿಗಳಿಗೆ ಶಾಶ್ವತ ಪರಿಹಾರ ಸಿಗುವುದೇ ಎಂಬುದನ್ನು ಕಾದು ನೋಡಬೇಕಿದೆ.

# ಆಸಿಡ್ ದಾಳಿ ಸಂತ್ರಸ್ತರಿಗೆ ರಕ್ಷಣೆ ಹಾಗೂ ಕಾನೂನು ಸೇವೆ ಒದಗಿಸುವುದು ನಮ್ಮ ಆದ್ಯ ಕರ್ತವ್ಯವಾಗಬೇಕು : ಜಿಲ್ಲಾಧಿಕಾರಿ ಎಂ.ಆರ್.ರವಿಕುಮಾರ್



ಕೋಲಾರ: ಸಮಾಜದಲ್ಲಿ ದ್ವೇಷ, ಅಸೂಯೆ ಮತ್ತು ಅಹಂಕಾರದ ಹಿನ್ನೆಲೆಯಲ್ಲಿ ಮಹಿಳೆಯರು ಹಾಗೂ ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ಆಸಿಡ್ ದಾಳಿಯಂತಹ ಅಮಾನುಷ ಕೃತ್ಯಗಳನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕಾನೂನು ಪಾಲನೆ ಹಾಗೂ ಸಮಾಜದಲ್ಲಿ ವ್ಯಾಪಕ ಜಾಗೃತಿಯ ಅಗತ್ಯವಿದೆ. ಆಸಿಡ್ ದಾಳಿ ಸಂತ್ರಸ್ಥರಿಗೆ ರಕ್ಷಣೆಯ ಜೊತೆಗೆ ಕಾನೂನು ಸೇವೆ ಒದಗಿಸುವುದು ನಮ್ಮ ಆದ್ಯ ಕರ್ತವ್ಯವಾಗಬೇಕು ಎಂದು ಜಿಲ್ಲಾಧಿಕಾರಿ ಎಂ.ಆರ್. ರವಿಕುಮಾರ್ ಅವರು ಅಭಿಪ್ರಾಯಪಟ್ಟರು.

ಇಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಭಾಂಗಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ವಕೀಲರ ಸಂಘ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಆರೋಗ್ಯ ಇಲಾಖೆ ಸಂಯುಕ್ತಾಶ್ರಯದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ 'ನಾಲ್ಸಾ (NALSA) ಯೋಜನೆಯಡಿ ಆಸಿಡ್ ದಾಳಿ ಸಂತ್ರಸ್ತರಿಗೆ ಕಾನೂನು ಸೇವೆಗಳು – 2016' ಕುರಿತ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ಸಮಾಜದಲ್ಲಿ ಕ್ಷುಲ್ಲಕ ಕಾರಣಗಳಿಗಾಗಿ, ಪ್ರೀತಿ ನಿರಾಕರಿಸಿದಂತಹ ಸಂದರ್ಭಗಳಲ್ಲಿ ಹೆಣ್ಣುಮಕ್ಕಳ ಮೇಲೆ ಆಸಿಡ್ ಎರಚುವಂತಹ ವಿಕೃತ ಮನಸ್ಥಿತಿಗಳು ಹೆಚ್ಚಾಗುತ್ತಿದ್ದು, ಇಂತಹ ಪ್ರಕರಣಗಳನ್ನು ಮಟ್ಟಹಾಕಲು ಆಡಳಿತ ವ್ಯವಸ್ಥೆಯೊಂದಿಗೆ ಸಾರ್ವಜನಿಕರು ಕೈಜೋಡಿಸಬೇಕು. ಇಂತಹ ಸಂತ್ರಸ್ಥರು ತಮ್ಮ ಜೀವನ ಕಟ್ಟಿಕೊಳ್ಳಲು ಸಮಾಜ ಅನುಕೂಲ ಮಾಡಿಕೊಳ್ಳಬೇಕು. ಅವರಿಗೆ ಕಾನೂನಿನ ಅಡಿಯಲ್ಲಿ ರಕ್ಷಣೆ ಸಹ ಒದಗಿಸಬೇಕು ಎಂದು ಅವರು ಕರೆ ನೀಡಿದರು. ನಂತರ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಕೆ. ಬಿ. ಪ್ರಸಾದ್ ಅವರು ಕಾನೂನು ಅಂಶಗಳ ಬಗ್ಗೆ ವಿಸ್ತೃತವಾಗಿ ವಿವರಿಸಿದರು. "ಭಾರತೀಯ ಸಂವಿಧಾನದ 14ನೇ ವಿಧಿಯು ಪ್ರತಿಯೊಬ್ಬರಿಗೂ ಸಮಾನತೆಯ ಹಕ್ಕನ್ನು ನೀಡಿದರೆ, 21ನೇ ವಿಧಿಯು ಗೌರವಯುತವಾಗಿ ಬದುಕುವ ಹಕ್ಕನ್ನು ಖಾತರಿಪಡಿಸುತ್ತದೆ" . ಸುಪ್ರೀಂ ಕೋರ್ಟ್‌ನ ಮಹತ್ವದ 'ಲಕ್ಷ್ಮಿ ವರ್ಸಸ್ ಯೂನಿಯನ್ ಆಫ್ ಇಂಡಿಯಾ' ಪ್ರಕರಣದ ತೀರ್ಪಿನ ಅನ್ವಯ ಆಸಿಡ್ ಮಾರಾಟದ ಮೇಲೆ ಕಟ್ಟುನಿಟ್ಟಿನ ನಿಯಂತ್ರಣ ಹೇರಲಾಗಿದೆ. ಅಂಗಡಿಗಳಲ್ಲಿ ಅನಧಿಕೃತವಾಗಿ ಆಸಿಡ್ ಮಾರಾಟ ಮಾಡುವಂತಿಲ್ಲ, ಖರೀದಿಸುವವರ ಗುರುತಿನ ಚೀಟಿ ಪಡೆಯುವುದು ಕಡ್ಡಾಯ ಹಾಗೂ ಈ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಬೇಕು ಎಂದು ತಿಳಿಸಿದರು. ಅಲ್ಲದೆ, 2016ರ ನಾಲ್ಸಾ ಯೋಜನೆಯಡಿ ಆಸಿಡ್ ದಾಳಿಗೆ ತುತ್ತಾದ ಸಂತ್ರಸ್ತರಿಗೆ ತಕ್ಷಣದ ಹಾಗೂ ಸಂಪೂರ್ಣ ಉಚಿತ ವೈದ್ಯಕೀಯ ಚಿಕಿತ್ಸೆ, ಕಾನೂನು ನೆರವು, ಪುನರ್ವಸತಿ ಹಾಗೂ ಕನಿಷ್ಠ 3 ಲಕ್ಷ ರೂ.ಗಳ ಪರಿಹಾರ ಒದಗಿಸುವ ಅವಕಾಶಗಳಿವೆ ಎಂದು ಮಾಹಿತಿ ನೀಡಿದರು. ಕಾರ್ಯಕ್ರಮದ ಕೊನೆಯಲ್ಲಿ ಮಾತನಾಡಿದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಎಲ್. ಶ್ರೀನಿವಾಸ್ ಅವರು, "ಯಾವುದೇ ಕಾನೂನಿನ ಅಂತಿಮ ಉದ್ದೇಶ ಸಮಾಜದ ಕಲ್ಯಾಣ ಮತ್ತು ರಕ್ಷಣೆಯಾಗಿದೆ" ಎಂದು ತಿಳಿಸಿದರು. ಆಸಿಡ್ ದಾಳಿಯಂತಹ ಪ್ರಕರಣಗಳಲ್ಲಿ ಸಂತ್ರಸ್ತರಿಗೆ ನ್ಯಾಯ ಒದಗಿಸಲು ವಕೀಲರ ಸಂಘ ಮತ್ತು ಕಾನೂನು ಸೇವೆಗಳ ಪ್ರಾಧಿಕಾರ ಸದಾ ಸಿದ್ಧವಿದ್ದು, ಸಂತ್ರಸ್ತರು ಯಾವುದೇ ಆತಂಕವಿಲ್ಲದೆ ಉಚಿತ ಕಾನೂನು ನೆರವನ್ನು ಪಡೆದುಕೊಳ್ಳಬಹುದು ಎಂದು ಭರವಸೆ ನೀಡಿದರು.

ವೇದಿಕೆಯಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರಭು ಎನ್. ಬಡಿಗೇರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ನಾರಾಯಣಸ್ವಾಮಿ, ಕೋಲಾರ ತಾಲ್ಲೂಕು ಆರೋಗ್ಯಾಧಿಕಾರಿ ಡಾ. ನಾರಾಯಣ ಸ್ವಾಮಿ, ಪೊಲೀಸ್ ಇಲಾಖೆಯ ಅಧಿಕಾರಿ ಲೋಕೇಶ್ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ನಾಗರತ್ನ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು. ಕಾರ್ಯಾಗಾರದಲ್ಲಿ ಅಂಗನವಾಡಿ ಮೇಲ್ವಿಚಾರಕಿಯರು, ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಕಾನೂನು ವಿದ್ಯಾರ್ಥಿಗಳು ಹಾಗೂ ಇಲಾಖೆಯ ಸಿಬ್ಬಂದಿ ಭಾಗವಹಿಸಿದ್ದರು.

# ಅಡುಗೆ ಕೋಣೆಯೇ ಔಷಧಾಲಯ: ಗಿಡಮೂಲಿಕೆಗಳ ಬಳಕೆಯಿಂದ ಉತ್ತಮ ಆರೋಗ್ಯ



ಮುಳಬಾಗಿಲು : ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಲಭ್ಯವಿರುವ ಗಿಡಮೂಲಿಕೆಗಳ ಬಗ್ಗೆ ಅರಿವು ಮೂಡಿಸಿಕೊಂಡು, ಅವುಗಳನ್ನು ದೈನಂದಿನ ಅಡುಗೆಯಲ್ಲಿ ಬಳಸುವುದರಿಂದ ನಮ್ಮ ಅಡುಗೆ ಕೋಣೆಯನ್ನೇ ಔಷಧಾಲಯವನ್ನಾಗಿ ಪರಿವರ್ತಿಸಬಹುದು ಎಂದು ನಿವೃತ್ತ ನೌಕರರ ಸಂಘದ ಉಪಾಧ್ಯಕ್ಷರಾದ ಎಸ್. ಆರ್. ವೆಂಕಟೇಶಪ್ಪ ಅಭಿಪ್ರಾಯಪಟ್ಟರು.

ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ಇತ್ತೀಚೆಗೆ ಹಮ್ಮಿಕೊಳ್ಳಲಾಗಿದ್ದ, ನಿವೃತ್ತ ನೌಕರರ ಮಾಸಿಕ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. "ಪ್ರತಿಯೊಂದು ಗಿಡಮೂಲಿಕೆಯೂ ತನ್ನದೇ ಆದ ವಿಶಿಷ್ಟ ಔಷಧೀಯ ಗುಣಗಳನ್ನು ಹೊಂದಿದೆ. ಹಿಂದಿನ ಕಾಲದಲ್ಲಿ ನಮ್ಮ ಅಜ್ಜ-ಅಜ್ಜಿಯರು ಇವುಗಳನ್ನೇ ಮನೆಮದ್ದಾಗಿ ಬಳಸುತ್ತಿದ್ದರು. ಆದರೆ, ಇತ್ತೀಚಿನ ದಿನಗಳಲ್ಲಿ ಹೋಮಿಯೋಪತಿಯಂತಹ ಔಷಧಗಳ ಅತಿಯಾದ ಬಳಕೆಯಿಂದ ಆಯುರ್ವೇದವು ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತಿದೆ. ಹೋಮಿಯೋಪತಿ ಹಾಗೂ ಆಧುನಿಕ ಔಷಧಗಳ ಬಳಕೆಯಿಂದ ಅಡ್ಡಪರಿಣಾಮಗಳು ಹೆಚ್ಚು. ಅದೇ ಆಯುರ್ವೇದ ಪದ್ಧತಿಯಿಂದ ನಿಧಾನಗತಿಯಲ್ಲಿ ಗುಣಮುಖರಾದರೂ, ದೀರ್ಘಕಾಲಿಕ ಹಾಗೂ ಶಾಶ್ವತ ಪರಿಹಾರ ದೊರೆಯುತ್ತದೆ" ಎಂದು ತಿಳಿಸಿದರು.

ಮನೆ ಮದ್ದು ಕಾರ್ಯಕ್ರಮ ಹಾಗೂ ಪ್ರಾತ್ಯಕ್ಷಿಕೆ: ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಜೀವವೈವಿಧ್ಯ ನಿರ್ವಹಣಾ ಸಮಿತಿ ಸದಸ್ಯ ಹಾಗೂ ನಾಗಸಂದ್ರ ಗ್ರಾಮದ ಪಾರಂಪರಿಕ ವೈದ್ಯ ಪಂಡಿತ್ ಡಾ. ಹರೀಶ್ ಬಾಬು ಅವರು ಮಾತನಾಡಿ, "ನಾವು ಗಿಡಮೂಲಿಕೆಗಳನ್ನು ಉಳಿಸಿ, ಬೆಳೆಸಿ, ಬಳಸುವುದರಿಂದ ನಮ್ಮ ಹಾಗೂ ಸಮಾಜದ ಆರೋಗ್ಯವನ್ನು ಸುಧಾರಿಸಿಕೊಳ್ಳಬಹುದು" ಎಂದರು.

"ಬೆಳಗಿನ ಜಾವ ಮಕ್ಕಳಿಗೆ ಒಂದೆಲಗ ಅಥವಾ ತುಳಸಿ ನೀಡುವುದರಿಂದ ಅವರ ಬುದ್ಧಿಶಕ್ತಿ ವಿಕಸನಗೊಳ್ಳುತ್ತದೆ. ಬೇವಿನ ಎಲೆಗಳ ಬಳಕೆಯಿಂದ ಅಲರ್ಜಿಯನ್ನು ತಡೆಗಟ್ಟಬಹುದು. ಅರಿಶಿನ ಎಲೆಯನ್ನು ಬಳಸಿ ಆರೋಗ್ಯಕರ ಚಹಾ ತಯಾರಿಸಬಹುದು ಹಾಗೂ ಬೆಲ್ಲದ ಸೊಪ್ಪಿನ ಸೇವನೆಯಿಂದ ಕಣ್ಣಿನ ದೃಷ್ಟಿ ಸುಧಾರಿಸುತ್ತದೆ" ಎಂದು ಅವರು ವಿವರಿಸಿದರು. ಇದೇ ಸಂದರ್ಭದಲ್ಲಿ ಸುಮಾರು 20ರಿಂದ 30 ವಿವಿಧ ಗಿಡಮೂಲಿಕೆಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿ,

ಅವುಗಳ ಔಷಧೀಯ ಗುಣಗಳು ಹಾಗೂ ದಿನನಿತ್ಯದ ಉಪಯೋಗಗಳ ಬಗ್ಗೆ ನೆರೆದಿದ್ದವರಿಗೆ ಸವಿವರವಾಗಿ ಮಾಹಿತಿ ನೀಡಿದರು. ಇಂತಹ ಪಾರಂಪರಿಕ ಜ್ಞಾನ ಹೊಂದಿರುವ ವೈದ್ಯರನ್ನು ಸಮಾಜ ಪ್ರೋತ್ಸಾಹಿಸುವುದರಿಂದ ಆರೋಗ್ಯಪೂರ್ಣ ಸಮಾಜದ ಬೆಳವಣಿಗೆ ಸಾಧ್ಯ ಎಂದು ಸಭೆಯಲ್ಲಿ ಒಮ್ಮತ ವ್ಯಕ್ತವಾಯಿತು.

ಸಭೆಯಲ್ಲಿ ನಿವೃತ್ತ ನೌಕರರ ಸಂಘದ ಕಾರ್ಯದರ್ಶಿ ಮುನಿರತ್ನಯ್ಯ, ಖಜಾಂಚಿ ಸಿದ್ದಲಿಂಗಯ್ಯ, ಮಹಿಳಾ ಘಟಕದ ಉಪಾಧ್ಯಕ್ಷರಾದ ಶಾರದಮ್ಮ ನಾರಾಯಣಸ್ವಾಮಿ ಸೇರಿದಂತೆ ಅನೇಕ ನಿವೃತ್ತ ನೌಕರರು ಉಪಸ್ಥಿತರಿದ್ದರು.

# ಎಸಿ ರೂಂನಿಂದ ಹಳ್ಳಿಯತ್ತ ಸರ್ಕಾರದ ದಿಟ್ಟ ಹೆಜ್ಜೆ: ಬಂಗವಾದಿಯಲ್ಲಿ ಪಾಳೇಗಾರಿಕೆ ಪ್ರದರ್ಶಿಸಿದ ಒತ್ತುವರಿದಾರರಿಗೆ ಡಿಸಿ ರವಿಕುಮಾರ್ ಎಚ್ಚರಿಕೆ



ಶ್ರೀನಿವಾಸಪುರ: ಸಾರ್ವಜನಿಕರ ಹಿತಾಸಕ್ತಿ ಹಾಗೂ ಸರ್ಕಾರಿ ಆಸ್ತಿಗಳ ರಕ್ಷಣೆಗೆ ಆಡಳಿತ ಯಂತ್ರ ಎಷ್ಟು ಬದ್ಧವಾಗಿದೆ ಎಂಬುದಕ್ಕೆ ಕೋಲಾರ ಜಿಲ್ಲಾಧಿಕಾರಿ ಎಂ.ಆರ್. ರವಿಕುಮಾರ್ ಅವರ ಇಂದಿನ ದಿಢೀರ್ ಕಾರ್ಯಾಚರಣೆ ಅತ್ಯುತ್ತಮ ಸಾಕ್ಷಿಯಾಗಿದೆ. ಕೇವಲ ಕಚೇರಿಯಲ್ಲೇ ಕುಳಿತು ಕಡತ ವಿಲೇವಾರಿ ಮಾಡದೆ, ಶ್ರೀನಿವಾಸಪುರ ತಾಲ್ಲೂಕು ಕಸಬಾ ಹೋಬಳಿಯ ಬಂಗವಾದಿ ಗ್ರಾಮಸ್ಥರ ದೂರಿನ ಮೇರೆಗೆ ನೇರವಾಗಿ ಹಳ್ಳಿಗೆ ಅನಿರೀಕ್ಷಿತ ಭೇಟಿ ನೀಡಿದ ಜಿಲ್ಲಾಧಿಕಾರಿಗಳು, ಜನಪರ ಆಡಳಿತದ ನೈಜ ಕಾಳಜಿಯನ್ನು ಪ್ರದರ್ಶಿಸಿದ್ದಾರೆ.

ದಬ್ಬಾಳಿಕೆ, ಪಾಳೇಗಾರಿಕೆಗೆ ಸರ್ಕಾರ ಸೊಪ್ಪು ಹಾಕಲ್ಲ: ಗ್ರಾಮದ ಸರ್ಕಾರಿ ಗೋಮಾಳ, ಬಂಡಿ ದಾರಿ ಹಾಗೂ ಕಾಲು ದಾರಿಯನ್ನು ಮುಚ್ಚಿ ಸಾರ್ವಜನಿಕರಿಗೆ ತೊಂದರೆ ನೀಡುತ್ತಿದ್ದವರ ವಿರುದ್ಧ ಜಿಲ್ಲಾಧಿಕಾರಿಗಳು ಸಿಡಿದೆದ್ದರು. ಸ್ಥಳ ಪರಿಶೀಲನೆ ವೇಳೆ ಎದುರುದಾರರಾದ ಪ್ರಕಾಶ್ ಹಾಗೂ ಇತರರು ಉದ್ಧಟತನ ತೋರಿದಾಗ, ಡಿಸಿ ಅವರು ಸರ್ಕಾರಿ ಅಧಿಕಾರದ ಗತ್ತು ಮತ್ತು ನ್ಯಾಯಪರತೆಯನ್ನು ಎತ್ತಿ ಹಿಡಿದರು. "ನಿಮ್ಮ ಪಾಳೇಗಾರಿಕೆ ಬಿಡಬೇಕು, ಈ ರೀತಿ ದಬ್ಬಾಳಿಕೆ ಮಾಡ್ತೀರಿ, ನೀವು ಈ ರೀತಿ ನಡ್ಕೊಂಡ್ರಲ್ಲ ಅದಕ್ಕೆ ನೀತಿ ರೀತಿ ಇದೆಯಾ" ಎಂದು ನೇರವಾಗಿಯೇ ತರಾಟೆಗೆ ತೆಗೆದುಕೊಂಡರು. ಊರಲ್ಲಿ ನೂರಾರು ಕುಟುಂಬಗಳಿದ್ದರೂ ದೂರುದಾರರನ್ನೇ ಏಕೆ ಟಾರ್ಗೆಟ್ ಮಾಡುತ್ತಿದ್ದೀರಿ, ಅವರೇನು ಪಾಕಿಸ್ತಾನದಿಂದ ಬಂದಿದ್ದಾರಾ ಎಂದು ಪ್ರಶ್ನಿಸಿದ ಡಿಸಿ, "ವ್ಯವಸ್ಥೆ ವಿರುದ್ಧ ಹೋಗಬೇಡಿ" ಎಂದು ಒತ್ತುವರಿದಾರರಿಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದರು. ಒಂದು ಇಂಚು ಸರ್ಕಾರಿ ಜಾಗವೂ ಒತ್ತುವರಿಯಾಗಿರಬಾರದು:

"ನಾವ್ಯಾರೂ 200 ವರ್ಷ, 300 ವರ್ಷ ಬದುಕಲ್ಲ. ಒಂದು ಸಂಸ್ಕೃತಿ, ತಾಳ್ಮೆ, ಸಹನೆಯನ್ನು ಎಲ್ಲರೂ ಬಿಟ್ಟುಹೋಗಿದ್ದಾರೆ. ನಾನೇನೋ ಇಲ್ಲಿ ದಾರಿ ಬಂದ್ ಮಾಡ್ಬಿಟ್ಟಿದ್ದೀನಿ ಎನ್ನುವ ಅಹಂಕಾರ ಬೇಡ, ಡಾಕ್ಯುಮೆಂಟ್ಸ್ ಬಹಳ ಇಂಪಾರ್ಟೆಂಟ್" ಎಂದು ಮಾರ್ಮಿಕವಾಗಿ ಬುದ್ಧಿವಾದ ಹೇಳಿದರು. ಅಲ್ಲದೆ, ಸ್ಥಳದಲ್ಲೇ ಜಮೀನಿನ ಕಡತಗಳನ್ನು ತರಿಸಿಕೊಂಡ ಅವರು, "ಸರ್ಕಾರಿ ಜಮೀನಿನಲ್ಲಿ ಒಂದು ಇಂಚು ಕೂಡ ನಾಳೆ ಸಂಜೆ ಒಳಗಡೆ ಒತ್ತುವರಿಯಾಗಿ ಇರಬಾರದು" ಎಂದು ಗುಡುಗುವ ಮೂಲಕ ಸರ್ಕಾರಿ ಆಸ್ತಿ ಉಳಿಸುವ ಸರ್ಕಾರದ ಬದ್ಧತೆಯನ್ನು ಸಾಬೀತುಪಡಿಸಿದರು.

ಯಾರೇ ಫೋನ್ ಮಾಡ್ಲಿ, ನಂಬರ್ ಕೊಡಿ ಸರ್ಕಾರಕ್ಕೆ ರಿಪೋರ್ಟ್ ಮಾಡ್ತೀನಿ:

ಒತ್ತುವರಿ ತೆರವು ಕಾರ್ಯಾಚರಣೆ ವೇಳೆ ಯಾವುದೇ ರಾಜಕೀಯ ಅಥವಾ ಪ್ರಭಾವಿಗಳ ಒತ್ತಡಕ್ಕೆ ಮಣಿಯದಂತೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಡಿಸಿ ರವಿಕುಮಾರ್ ಅಭಯ ನೀಡಿದರು. "ಅದ್ಯಾರೇ ಫೋನ್ ಮಾಡ್ಲಿ, ಅವರ ಹೆಸರು, ಅವರ ಮೊಬೈಲ್ ನಂಬರ್, ಅವರ ಹುದ್ದೆ ರೆಕಾರ್ಡ್ ಮಾಡಿ, ಸರ್ಕಾರಕ್ಕೆ ವರದಿ ಮಾಡುತ್ತೇವೆ ಎಂದು ದಿಟ್ಟತನದಿಂದ ಹೇಳುವ ಮೂಲಕ ಭ್ರಷ್ಟಾಚಾರ ಹಾಗೂ ಪ್ರಭಾವ ಮುಕ್ತ ಆಡಳಿತಕ್ಕೆ ಮುನ್ನುಡಿ ಬರೆದರು.

ಸ್ಥಳದಲ್ಲೇ ಅಧಿಕಾರಿಗಳಿಗೆ ಖಡಕ್ ಸೂಚನೆ: ಯಾವುದೇ ವಿಳಂಬಕ್ಕೆ ಆಸ್ಪದ ನೀಡದೆ, ಸ್ಥಳದಲ್ಲಿದ್ದ ತಹಶೀಲ್ದಾರ್ ಸುಧೀಂದ್ರ, ಆರ್.ಐ ಮಂಜುನಾಥ್ ಹಾಗೂ ಗ್ರಾಮ ಲೆಕ್ಕಿಗರಿಗೆ (ವಿಎ) ಡಿಸಿ ಕಟ್ಟುನಿಟ್ಟಿನ ಆದೇಶ ನೀಡಿದರು. "ಎಷ್ಟು ಗೋಮಾಳ ಇದೆಯೋ ನನಗೆ ಕಂಪ್ಲೀಟ್ ರಿಪೋರ್ಟ್ ಮಾಡಿ. ವಿಎ ರಿಪೋರ್ಟ್, ಆರ್ ಐ ರಿಪೋರ್ಟ್, ತಹಸೀಲ್ದಾರ್ ರಿಪೋರ್ಟ್ ಹಾಕಿ ನನಗೆ ಕಳಿಸಿ, ನಾನು ಆದೇಶ ಮಾಡ್ತೀನಿ. ಕಾಲು ದಾರಿ ಮುಚ್ಚಿದ್ದಾರಲ್ಲ ಅದರ ಬಗ್ಗೆಯೂ ರಿಪೋರ್ಟ್ ಹಾಕಿ, ಅದರ ಮೇಲೆ ಕ್ರಮ ಮಾಡ್ತೀನಿ" ಎಂದು ಸೂಚಿಸಿದರು.

ಒಟ್ಟಾರೆಯಾಗಿ, ಸಾಮಾನ್ಯ ಜನರ ಅಹವಾಲುಗಳಿಗೆ ಸರ್ಕಾರ ತಕ್ಷಣ ಸ್ಪಂದಿಸುತ್ತದೆ ಮತ್ತು ಅನ್ಯಾಯದ ವಿರುದ್ಧ ಅಧಿಕಾರಿಗಳು ನಿರ್ದಾಕ್ಷಿಣ್ಯವಾಗಿ ನಿಲ್ಲುತ್ತಾರೆ ಎಂಬುದನ್ನು ಜಿಲ್ಲಾಧಿಕಾರಿಗಳ ಈ ದಿಟ್ಟ ಭೇಟಿ ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಟ್ಟಿದ್ದು, ಆಡಳಿತ ಯಂತ್ರದ ಮೇಲಿನ ಜನರ ವಿಶ್ವಾಸವನ್ನು ಇನ್ನಷ್ಟು ಹೆಚ್ಚಿಸಿದೆ.

# ಪುಸ್ತಕಗಳ ಪಟ್ಟಿ ಪ್ರಕಟ–ಆಕ್ಷೇಪಣೆ ಸಲ್ಲಿಕೆಗೆ ಅವಕಾಶ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಕ್ಕಬಳ್ಳಾಪುರ:** 2023 ರಲ್ಲಿ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಗಾಗಿ ಸ್ವೀಕರಿಸಿದ ಪುಸ್ತಕಗಳ ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದು, ಆಯ್ಕೆಯಾದ ಹಾಗೂ ಆಯ್ಕೆಯಾಗದ ಪುಸ್ತಕಗಳ ತಾತ್ಕಾಲಿಕ ಪಟ್ಟಿಯನ್ನು ಹಾಗೂ ಸದರಿ ಪುಸ್ತಕಗಳ ಪ್ರದರ್ಶನವ ಅ.12ರಿಂದ ಅ.14ರವರೆಗೆ ಡಾ.ವಿಷ್ಣುವರ್ಧನ ಸ್ಮಾರಕ ಸ್ಪರ್ಧಾತ್ಮಕ ಪರೀಕ್ಷೆಗಳ ಅಧ್ಯಯನ ಕೇಂದ್ರ, ಎಂ.ಸಿ ಬಡಾವಣೆ, ಬಾಲಗಂಗಾಧರನಾಥ ಸ್ವಾಮಿಜಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಹತ್ತಿರ ವಿಜಯನಗರ, ಬೆಂಗಳೂರು–560040, ಗ್ರಂಥಾಲಯದ ಸಭಾಂಗಣದಲ್ಲಿ ನೆಲ ಮಹಡಿ ಇಲ್ಲಿ ಏರ್ಪಡಿಸಲಾಗಿದೆ.

ಆಯ್ಕೆಯಾದ ಪುಸ್ತಕಗಳ ತಾತ್ಕಾಲಿಕ ಪಟ್ಟಿಯನ್ನು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಅಧಿಕೃತ ವೆಬ್ ಸೈಟ್ ನಲ್ಲಿ ಪ್ರದರ್ಶಿಸಲಾಗಿರುತ್ತದೆ. ಈ ಸಂಬಂಧ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಗಾಗಿ ಸಲ್ಲಿಸಿದ ಲೇಖಕರು ಲೇಖಕ ಪ್ರಕಾಶಕರು ಹಾಗೂ ಪುಸ್ತಕ ಮಾರಾಟಗಾರರು, ಆಕ್ಷೇಪಣೆಗಳಿದ್ದಲ್ಲಿ ದಿನಾಂಕ: 12/10/2026 ರಿಂದ ದಿನಾಂಕ: 22/10/2026ರ ಸಂಜೆ 5.30 ರ ಒಳಗಾಗಿ ಆಯುಕ್ತರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ.ಅಂಬೇಡ್ಕರ್ ವೀದಿ, ಬೆಂಗಳೂರು–560001 ಇಲ್ಲಿಗೆ ಲಿಖಿತವಾಗಿ ಮನವಿಗಳನ್ನು ಸಲ್ಲಿಸತಕ್ಕದ್ದು ನಂತರ ಬಂದ ಮನವಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸುವುದಿಲ್ಲ.

# ಕ್ರೀಡಾಪಟುವಿನ ಪ್ರಧಾನಮಂತ್ರಿ



**ಕುಮಾರಿ ಇಳವೇನಿಲ್ ವಲರಿವನ್**
(ಲೇಖಕರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಪ್ರತಿನಿಧಿಸಿದ ಪ್ರಮುಖ ಕ್ರೀಡಾಪಟು)

ಏಷ್ಯನ್ ಗೇಮ್ಸ್ ಕ್ರೀಡಾಕೂಟ ಮುಕ್ತಾಯ ವಾಗುತ್ತಿದ್ದಂತೆ, ಭಾರತವು ತನ್ನ ಕ್ರೀಡಾಪಟುಗಳ ಪ್ರದರ್ಶನಗಳನ್ನು ಹೆಮ್ಮೆಯಿಂದ ಸ್ಮರಿಸಬಹುದು, ಜೊತೆಗೆ ನಾವು ಎಲ್ಲಿ ಸುಧಾರಿಸಬೇಕು ಎಂಬುದರ ಬಗ್ಗೆ ಅವಲೋಕಿಸಬಹುದು. ಸ್ಪರ್ಧಿಸುವ ನಮ್ಮಂತಹವರಿಗೆ, ಇದು ಕ್ರೀಡೆಯ ಲಯವಾಗಿದೆ. ಈ ರೀತಿಯ ಕ್ಷಣಗಳು ನಮ್ಮ ಪ್ರಯಾಣವನ್ನು ಸಾಧ್ಯವಾಗಿಸಲು ಸಹಾಯ ಮಾಡಿದ ಜನರನ್ನು ಗುರುತಿಸಲು ನಮ್ಮನ್ನು ಆಹ್ವಾನಿಸುತ್ತವೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಆಡಳಿತದಲ್ಲಿ 25 ವರ್ಷಗಳನ್ನು ಪೂರೈಸುತ್ತಿರುವ ಈ ಸಂದರ್ಭದಲ್ಲಿ, ಭಾರತೀಯ ಕ್ರೀಡೆಗೆ ಅವರ ಕೊಡುಗೆಯು ಅವಲೋಕನಕ್ಕೆ ಅರ್ಹವಾಗಿದೆ. ಗುಜರಾತಿನ ಮುಖ್ಯಮಂತ್ರಿಯಾಗಿ ಮತ್ತು ಭಾರತದ ಪ್ರಧಾನಮಂತ್ರಿಯಾಗಿ ಅವರ ಆಡಳಿತದ ವರ್ಷಗಳದುದ್ದಕ್ಕೂ, ಕ್ರೀಡಾಪಟುಗಳು ಗೌರವಿಸುವಂತಹ ಸ್ಥಿರತೆಯೊಂದಿಗೆ ಅವರು ಕ್ರೀಡಾ ಮಹತ್ವಾಕಾಂಕ್ಷೆಗಳನ್ನು ಪೋಷಿಸಿದ್ದಾರೆ. ಅವರು ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಿದ್ದಾರೆ, ಸಿದ್ಧತೆಗೆ ಬೆಂಬಲ ನೀಡಿದ್ದಾರೆ ಮತ್ತು ಗೆಲುವು ಹಾಗೂ ನಿರಾಸೆಗಳೆರಡರಲ್ಲೂ ಕ್ರೀಡಾಪಟುಗಳ ಬೆಂಬಲಕ್ಕೆ ನಿಂತಿದ್ದಾರೆ. ಕ್ರೀಡಾಪಟುವೊಬ್ಬ ವೇದಿಕೆಯ ಮೇಲೆ ನಿಲ್ಲುವ ಮುನ್ನ ಸಾಗುವ ಸುದೀರ್ಘ ಪಯಣದ ಮೇಲೂ ಅವರ ಆಸಕ್ತಿ ವಿಸ್ತರಿಸುತ್ತದೆ.

ನಮ್ಮ ಪ್ರಧಾನಮಂತ್ರಿ ಮೋದಿ ಅವರನ್ನು ನಾನು ಮೊದಲ ಬಾರಿಗೆ ಭೇಟಿಯಾದ ಕ್ಷಣ ನನಗೆ ಸ್ಪಷ್ಟವಾಗಿ ನೆನಪಿದೆ. ಅದು ಖೋಖರಾ ಕ್ರೀಡಾ ಸಂಕೀರ್ಣದ ಉದ್ಘಾಟನಾ ಸಮಾರಂಭ. ನಾನು ಕ್ರೀಡಾಪಟುವಾಗುವ ಕನಸು ಹೊತ್ತಿದ್ದ ಎಳೆಯ ಮಗುವಾಗಿದ್ದೆ. ಹಿಂತಿರುಗಿ ನೋಡಿದಾಗ, ಆ ನೆನಪು ನನ್ನ ಆರಂಭಿಕ ಕ್ರೀಡಾ ಆಕಾಂಕ್ಷೆಗಳನ್ನು ಹಾಗೂ ಮುಂದಿನ ವರ್ಷಗಳಲ್ಲಿ ನಾನು ಭಾರತವನ್ನು ಪ್ರತಿನಿಧಿಸಿದಾಗ ನನಗೆ ಪ್ರೋತ್ಸಾಹ ನೀಡಿದ ನಾಯಕರೊಬ್ಬರ ಜೊತೆ ಸಂಪರ್ಕಿಸುತ್ತದೆ.

ಟೋಕಿಯೊ ಒಲಂಪಿಕ್ ಕ್ರೀಡಾಕೂಟಕ್ಕೆ ತೆರಳುವ ಮುನ್ನ ನಾನು ಅವರನ್ನು ಮತ್ತೆ ಭೇಟಿಯಾಗಿದ್ದೆ. ನಾನು ಅವರ ಹಿಂದಿನ ವಿಧಾನಸಭಾ ಕ್ಷೇತ್ರವಾದ ಮಣಿನಗರದಲ್ಲಿ ವಾಸಿಸುತ್ತಿದ್ದೆ ಎಂಬುದನ್ನು ಅವರು ನೆನಪಿಸಿಕೊಂಡರು ಮತ್ತು ಅಲ್ಲಿ ಅಭಿವೃದ್ಧಿಪಡಿಸಲಾದ ಕ್ರೀಡಾ ಸೌಲಭ್ಯಗಳನ್ನು ಸ್ಮರಿಸಿದರು. ಅವರ ಕಚೇರಿಯ ಒತ್ತಡಗಳ ನಡುವೆಯೂ, ಅವರು ಸೇವೆ ಸಲ್ಲಿಸಿದ್ದ ಸ್ಥಳದೊಂದಿಗಿನ ನನ್ನ ನಂಟನ್ನು ನೆನಪಿಟ್ಟುಕೊಂಡಿದ್ದಕ್ಕಾಗಿ ನಾನು ತುಂಬಾ ಭಾವುಕಳಾದೆ. ತಮ್ಮ ಕ್ಷೇತ್ರದ ಯುವ ಕ್ರೀಡಾಪಟುವೊಬ್ಬಳು ಭಾರತವನ್ನು ಪ್ರತಿನಿಧಿಸಲು ಸಿದ್ಧರಾಗುತ್ತಿರುವುದನ್ನು ನೋಡಿದ ಅವರ ಹೆಮ್ಮೆ ವೈಯಕ್ತಿಕವೆನಿಸಿತು ಮತ್ತು ಅವರ ಪ್ರೋತ್ಸಾಹ ದೇಶಕ್ಕಾಗಿ ನನ್ನ ಅತ್ಯುತ್ತಮವಾದುದನ್ನು ನೀಡುವ ನನ್ನ ದೃಢಸಂಕಲ್ಪವನ್ನು ಬಲಪಡಿಸಿತು.

ಟೋಕಿಯೊ ನಂತರ ನಾವು ಭೇಟಿಯಾದಾಗ, ಪಂದ್ಯಾವಳಿಯ ಸಕಾರಾತ್ಮಕ ಅಂಶಗಳನ್ನು ನೋಡಲು ಮತ್ತು ದೇಶಕ್ಕಾಗಿ ನನ್ನ ಅತ್ಯುತ್ತಮ ಪ್ರಯತ್ನವನ್ನು ಮುಂದುವರಿಸಲು ಅವರು ನನ್ನನ್ನು ಪ್ರೋತ್ಸಾಹಿಸಿದರು. ಕ್ರೀಡಾಪಟುವಿಗೆ ಇಂತಹ ಮಾತುಗಳು ಬಹಳ ಮುಖ್ಯ. ಸ್ಪರ್ಧೆಯು ನಾವು ಅಂದುಕೊಂಡಂತೆ ನಡೆಯದಿದ್ದಾಗ, ಪ್ರೋತ್ಸಾಹವು ನಮ್ಮ ದೃಷ್ಟಿಕೋನವನ್ನು ಮರಳಿ ಪಡೆಯಲು ಮತ್ತು ಹೊಸ ಉದ್ದೇಶದೊಂದಿಗೆ ತರಬೇತಿಗೆ ಮರಳಲು ಸಹಾಯ ಮಾಡುತ್ತದೆ.

ನನ್ನ ಮನಸ್ಸಿನಲ್ಲಿ ಉಳಿದಿರುವ ಸಂಗತಿಯೆಂದರೆ, ನನ್ನ ಜೀವನದ ಆ ವಿವಿಧ ಹಂತಗಳಲ್ಲಿ ಮುಂದುವರಿದ ಅವರ ಬೆಂಬಲ. ಕ್ರೀಡಾ ಕನಸು ಹೊತ್ತಿದ್ದ ಮಗು ಮತ್ತು ಒಲಿಂಪಿಕ್ಸ್ ನಿಂದ ಹಿಂದಿರುಗಿದ ಕ್ರೀಡಾಪಟು, ಇಬ್ಬರಿಗೂ ಮುನ್ನಡೆಯಲು ಅವರಿಂದ ಪ್ರೋತ್ಸಾಹ ದೊರಕಿತು.

ಗುಜರಾತಿನಾದ್ಯಂತ ಕ್ರೀಡೆಗಳನ್ನು ಉತ್ತೇಜಿಸಲು ಮತ್ತು ತಳಮಟ್ಟದ ಪ್ರತಿಭೆಗಳನ್ನು ಗುರುತಿಸಲು ಮೋದಿ ಅವರು ಮುಖ್ಯಮಂತ್ರಿಯಾಗಿದ್ದಾಗ ಹುಟ್ಟುಹಾಕಿದ ?ಖೇಲ್ ಮಹಾಕುಂಭ್ ನಲ್ಲಿ ನಾನೂ ಭಾಗಿಯಾಗಿದ್ದೆ. ಅವರು ಈ ಉಪಕ್ರಮಕ್ಕೆ ವೈಯಕ್ತಿಕ ಗಮನ ನೀಡಿದರು ಮತ್ತು ವ್ಯಾಪಕ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಲು ತಮ್ಮ ನಾಯಕತ್ವವನ್ನು ಬಳಸಿದರು. ರಾಜ್ಯದ ಸಾರ್ವಜನಿಕ ಜೀವನದಲ್ಲಿ ಕ್ರೀಡೆಗೆ ಪ್ರಮುಖ ಸ್ಥಾನ ನೀಡುವ ಮೂಲಕ, ಮಕ್ಕಳು, ಪೋಷಕರು, ಶಾಲೆಗಳು ಮತ್ತು ಸಮುದಾಯಗಳು ಒಟ್ಟಾಗಿ ಸೇರುವ ಸ್ಪರ್ಧೆಯನ್ನಾಗಿ ಮಾಡಲು ಅವರು ಸಹಾಯ ಮಾಡಿದರು.

ಖೇಲ್ ಮಹಾಕುಂಭ್ ಗೆ ಅವರು ನೀಡಿದ ಪ್ರೋತ್ಸಾಹವು ಸ್ಪಷ್ಟ ಸಂದೇಶ ಹೊಂದಿತ್ತು: ಗುಜರಾತ್ನ ಯುವಜನರಿಗೆ ತಮ್ಮ ಕ್ರೀಡಾ ಸಾಮರ್ಥ್ಯಗಳನ್ನು ಕಂಡುಕೊಳ್ಳಲು ಅವಕಾಶ ಸಿಗಬೇಕು. ಇದು ಮಕ್ಕಳು ಆಟದ ಮೈದಾನಕ್ಕೆ ಕಾಲಿಡಲು ಮತ್ತು ಕುಟುಂಬಗಳು ತಮ್ಮ ಮಕ್ಕಳ ಮಹತ್ವಾಕಾಂಕ್ಷೆಗಳನ್ನು ಗಂಭೀರವಾಗಿ ಪರಿಗಣಿಸಲು ಪ್ರೋತ್ಸಾಹಿಸಿತು. ಸಾಮರ್ಥ್ಯ ಇರುವವರೆಗೆ, ಕ್ರೀಡೆಯ ಮೇಲಿನ ಉತ್ಸಾಹ ಕ್ರೀಡಾ ವೃತ್ತಿಯನ್ನಾಗಿ ಬೆಳೆಸಿಕೊಳ್ಳಲು ಇದು ಒಂದು ಮಾರ್ಗ ಸೃಷ್ಟಿಸಿತು. ಪ್ರತಿಯೊಬ್ಬ ಕ್ರೀಡಾಪಟುವಿಗೂ ಆ ಮೊದಲ ಅವಕಾಶದ ಅಗತ್ಯವಿರುತ್ತದೆ. ವಿಶೇಷ ತರಬೇತಿ ಅಥವಾ ಅಂತಾರಾಷ್ಟ್ರೀಯ ಸ್ಪರ್ಧೆಗಿಂತ ಮುಂಚಿತವಾಗಿ, ಆಡಲು ಒಂದು ಸ್ಥಳ ಮತ್ತು ನಿಮ್ಮನ್ನು ಪ್ರೋತ್ಸಾಹಿಸಲು ಸಿದ್ಧರಿರುವ ಯಾರಾದರೂಬ್ಬರು ಇರಬೇಕು. ಖೇಲ್ ಮಹಾಕುಂಭ್ ಅಂತಹ ವಾತಾವರಣವನ್ನು ಸೃಷ್ಟಿಸಲು ಸಹಾಯ ಮಾಡಿತು, ಭಾಗವಹಿಸುವಿಕೆಯನ್ನು ವಿಸ್ತರಿಸಿತು ಮತ್ತು ರಾಜ್ಯದಾದ್ಯಂತ ಪ್ರತಿಭೆಗಳತ್ತ ಹೆಚ್ಚಿನ ಗಮನ ಸೆಳೆಯಿತು. ಗುಜರಾತಿನಲ್ಲಿ ಚೆಸ್ ಆಟದ ಮೇಲೆ ಮೋದಿಯವರು ನೀಡಿದ ಒತ್ತು ಈ ದೃಷ್ಟಿಕೋನದ ವಿಸ್ತಾರವನ್ನು ಪ್ರತಿಬಿಂಬಿಸುತ್ತದೆ. ಬೇರೆ ಬೇರೆ ಮಕ್ಕಳು ವಿಭಿನ್ನ ಸಾಮರ್ಥ್ಯಗಳನ್ನು ಹೊಂದಿರುತ್ತಾರೆ ಮತ್ತು ಆ ಸಾಮರ್ಥ್ಯಗಳನ್ನು ಕಂಡುಕೊಳ್ಳಲು ಕ್ರೀಡೆಯು ಅವರಿಗೆ ಅವಕಾಶ ನೀಡಬೇಕು. ಸಾಂಪ್ರದಾಯಿಕ ಕ್ರೀಡೆಗಳಿಗೆ ಅವರು ನೀಡಿದ ಪ್ರೋತ್ಸಾಹ ನಮ್ಮ ಸಮುದಾಯಗಳಲ್ಲಿರುವ ಪ್ರತಿಭೆ ಮತ್ತು ಕ್ರೀಡಾ ಪರಂಪರೆಯನ್ನು ಅದೇ ರೀತಿ ಗುರುತಿಸಿತು.

ಕಾಲಾನಂತರದಲ್ಲಿ, ಖೇಲ್ ಮಹಾಕುಂಭ್ ಮೂಲಕ ಅವರು ಪೋಷಿಸಿದ ಮಹತ್ವಾಕಾಂಕ್ಷೆಯು ಖೇಲೋ ಇಂಡಿಯಾ ಮೂಲಕ ವಿಶಾಲ ರಾಷ್ಟ್ರೀಯ ಅಭಿವ್ಯಕ್ತಿಯನ್ನು ಕಂಡುಕೊಂಡಿತು.

2018 ರಿಂದ 63,000ಕ್ಕೂ ಹೆಚ್ಚು ಕ್ರೀಡಾಪಟುಗಳು ಖೇಲೋ ಇಂಡಿಯಾ ಗೇಮ್ಸ್‌ನಲ್ಲಿ ಭಾಗವಹಿಸಿದ್ದಾರೆ. ಇದು ಯುವ ಪ್ರತಿಭೆಗಳಿಗೆ ಸ್ಪರ್ಧಿಸಲು ಮತ್ತು ಗುರುತಿಸಿಕೊಳ್ಳಲು ಅವಕಾಶಗಳನ್ನು ಒದಗಿಸಿದೆ. 1,000ಕ್ಕೂ ಹೆಚ್ಚು ತರಬೇತಿ ಕೇಂದ್ರಗಳನ್ನು ಸ್ಥಾಪಿಸುವ ಮೂಲಕ, ಭರವಸೆಯ ಕ್ರೀಡಾಪಟುಗಳಿಗೆ ಪ್ರಗತಿ ಹೊಂದಲು ಅಗತ್ಯ ತರಬೇತಿ, ಉಪಕರಣಗಳು ಮತ್ತು ಕಾಳಜಿ ಪಡೆಯಲು ಖೇಲೋ ಇಂಡಿಯಾ ಸಹಾಯ ಮಾಡಿದೆ. ಖೇಲೋ ಇಂಡಿಯಾದ ಅನೇಕ ಕ್ರೀಡಾಪಟುಗಳು ಈಗ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಪ್ರತಿನಿಧಿಸುತ್ತಿದ್ದಾರೆ. ಹೆಚ್ಚು ಯುವ ಕ್ರೀಡಾಪಟುಗಳಿಗೆ ಚಾಂಪಿಯನ್ ಆಗಲು ಅವಕಾಶ ಮತ್ತು ಬೆಂಬಲ ನೀಡುವ ಮೂಲಕ ಹೀಗೆ ಬಲಿಷ್ಠ ಕ್ರೀಡಾ ರಾಷ್ಟ್ರವೊಂದನ್ನು ನಿರ್ಮಿಸಬಹುದಾಗಿದೆ. ಖೇಲ್ ಮಹಾಕುಂಭ್ ಮತ್ತು ಖೇಲೋ ಇಂಡಿಯಾ ದಾದ್ಯಂತ ಇರುವ ಮೂಲಭೂತ ನಂಬಿಕೆ ಒಂದೇ ಆಗಿದೆ: ಕ್ರೀಡಾ ಸಾಮರ್ಥ್ಯವನ್ನು ಮೊದಲೇ ಗುರುತಿಸಬೇಕು ಮತ್ತು ತಾಳ್ಮೆಯಿಂದ ಪೋಷಿಸಬೇಕು. ಯುವ ಕ್ರೀಡಾಪಟುಗಳಿಗೆ ಅವರ ಭವಿಷ್ಯವು ರೂಪುಗೊಳ್ಳುತ್ತಿರುವ ವರ್ಷಗಳಲ್ಲಿ ನಿಯಮಿತ ಸ್ಪರ್ಧೆ, ತರಬೇತಿ ಮತ್ತು ಬೆಂಬಲದ ಅಗತ್ಯವಿರುತ್ತದೆ.

ರಾಷ್ಟ್ರೀಯ ಮಟ್ಟದಲ್ಲಿ, ಟಾರ್ಗೆಟ್ ಒಲಂಪಿಕ್ ಪೋಡಿಯಂ ಸ್ಕೀಮ್ (ಟಾಪ್ಸ್) ಕ್ರೀಡಾಪಟುಗಳಿಗೆ ವಿಶ್ವ ದರ್ಜೆಯ ಸೌಲಭ್ಯಗಳು ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸಲು ಅಗತ್ಯ ಬೆಂಬಲ ಪಡೆಯುವುದನ್ನು ಖಚಿತಪಡಿಸಿದೆ. ಟಾಪ್ಸ್ ಯೋಜನೆಯು 52 ಪ್ಯಾರಾ–ಕ್ರೀಡಾಪಟುಗಳು ಸೇರಿದಂತೆ 233 ಕ್ರೀಡಾಪಟುಗಳಿಗೆ ಪರಿಣಿತ ತರಬೇತಿ, ವಿಶೇಷ ಉಪಕರಣಗಳು, ವಿದೇಶಿ ತರಬೇತಿ ಮತ್ತು ಸ್ಪರ್ಧೆಯ ಮಾನ್ಯತೆಯೊಂದಿಗೆ ಬೆಂಬಲ ನೀಡಿದೆ.

ಕ್ರೀಡಾಪಟುಗಳು ಮತ್ತು ಅವರ ಕುಟುಂಬಗಳಿಗೆ, ಇದು ಪ್ರಾಯೋಗಿಕ ವ್ಯತ್ಯಾಸವನ್ನು ಸ್ಪಷ್ಟಪಡಿಸುತ್ತದೆ. ಅಂತಾರಾಷ್ಟ್ರೀಯ ಕ್ರೀಡೆಗೆ ತಯಾರಿ ನಡೆಸಲು ಕುಟುಂಬಗಳು ಯಾವಾಗಲೂ ಒಂಟಿಯಾಗಿ ಸಂಪನ್ಮೂಲಗಳನ್ನು ಒದಿಗಸಲು ಸಾಧ್ಯವಾಗುವುದಿಲ್ಲ. ಈ ಹೊರೆ ಕಡಿಮೆ ಮಾಡುವ ನಿಟ್ಟಿನಲ್ಲಿ ನಮಗೆ ನೀಡಲಾಗುವ ಬೆಂಬಲವು ಕ್ರೀಡಾಪಟುಗಳು ತರಬೇತಿಯತ್ತ ಹೆಚ್ಚು ಗಮನಹರಿಸಲು ಮತ್ತು ಹೆಚ್ಚಿನ ಆತ್ಮವಿಶ್ವಾಸದಿಂದ ಪ್ರಮುಖ ಸ್ಪರ್ಧೆಗಳನ್ನು ಎದುರಿಸಲು ಅನುವು ಮಾಡಿಕೊಡುತ್ತದೆ.

ಮೋದಿ ಅವರು ಪ್ರಧಾನಮಂತ್ರಿಯಾದಾಗಿನಿಂದ ಕ್ರೀಡಾ ಸಚಿವಾಲಯದ ಬಜೆಟ್ ಬಹುತೇಕ ಮೂರು ಪಟ್ಟು ಹೆಚ್ಚಾಗಿದೆ ಎಂದು ಓದಲು ನನಗೆ ಸಂತೋಷವಾಯಿತು. ಇದು ಭಾರತೀಯ ಕ್ರೀಡಾಪಟುಗಳಿಗೆ ಅಗತ್ಯವಿರುವ ಸಂಪನ್ಮೂಲಗಳನ್ನು ನೀಡುವ ಪ್ರಧಾನಮಂತ್ರಿ ಮೋದಿ ಅವರ ನಿರಂತರ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ಉತ್ತಮ ಸೌಲಭ್ಯ, ವೈದ್ಯಕೀಯ ಆರೈಕೆ, ಆಹಾರ ಯೋಜನೆ, ಚೇತರಿಕೆ ಬೆಂಬಲ ಮತ್ತು ತಜ್ಞರ ಲಭ್ಯತೆಯ ಮೂಲಕ ಆ ಹೂಡಿಕೆಯ ಮೌಲ್ಯವು ಗೋಚರಿಸುತ್ತಿದೆ.

ಖೇಲೋ ಇಂಡಿಯಾ ಕೇಂದ್ರಗಳು ಮತ್ತು ಉನ್ನತೀಕರಿಸಿದ ನ್ಯಾಷನಲ್ ಸೆಂಟರ್ಸ್ ಆಫ್ ಎಕ್ಸಲೆನ್ಸ್ ಈ ಅಡಿಪಾಯವನ್ನು ಮತ್ತಷ್ಟು ಬಲಪಡಿಸಿವೆ. ರಾಷ್ಟ್ರೀಯ ಕ್ರೀಡಾ ನೀತಿ ಮತ್ತು ಕ್ರೀಡಾ ಆಡಳಿತದಲ್ಲಿನ ಸುಧಾರಣೆಗಳು ಈ ಬದ್ಧತೆಯನ್ನು ಮುಂದಕ್ಕೆ ಕೊಂಡೊಯ್ಯುತ್ತವೆ. ಜೊತೆಗೆ, ಪ್ರಮುಖ ಅಂತಾರಾಷ್ಟ್ರೀಯ ಸ್ಪರ್ಧೆಗಳನ್ನು ಆಯೋಜಿಸುವ ಭಾರತದ ಮಹತ್ವಾಕಾಂಕ್ಷೆಗಳು ಮುಂದಿನ ಪೀಳಿಗೆಗೆ ವಿಶಾಲ ಅವಕಾಶಗಳನ್ನು ತೆರೆಯುತ್ತವೆ.

ಕ್ರೀಡೆಗಳಿಗೆ ಮೋದಿ ಅವರು ನೀಡಿದ ಕೆಲವು ಅತ್ಯಂತ ಅರ್ಥಪೂರ್ಣ ಕೊಡುಗೆಗಳು ಬಹಳ ವೈಯಕ್ತಿಕವೂ ಆಗಿವೆ. ಪ್ಯಾರಿಸ್ ಒಲಿಂಪಿಕ್ಸ್ ಸಮಯದಲ್ಲಿ, ನಾವು ಕ್ರೀಡಾಗ್ರಾಮದಲ್ಲಿ ಶಾಖ ಮತ್ತು ಹವಾನಿಯಂತ್ರಣದ ಕೊರತೆಯಿಂದಾಗಿ ಪರದಾಡಿದೆವು. ನಮ್ಮ ಸೌಕರ್ಯವನ್ನು ಖಚಿತಪಡಿಸಿಕೊಳ್ಳಲು ಹಾಗೂ ನಾವು ಸರಿಯಾಗಿ ವಿಶ್ರಾಂತಿ ಪಡೆಯಲು ಮತ್ತು ಸಿದ್ಧರಾಗಲು ನೆರವಾಗುವ ನಿಟ್ಟಿನಲ್ಲಿ ನಲವತ್ತು ಪೋರ್ಟಬಲ್ ಎಸಿಗಳನ್ನು ತ್ವರಿತವಾಗಿ ವ್ಯವಸ್ಥೆ ಮಾಡಲಾಯಿತು. ನಮ್ಮನ್ನು ಸ್ಪರ್ಶಿಸಿದ ವಿಷಯವೆಂದರೆ, ನಾವು ನಂತರ ಮೋದಿಯವರನ್ನು ಭೇಟಿಯಾದಾಗ, ನಾವು ಎದುರಿಸಿದ ಕಷ್ಟವನ್ನು ಅವರು ನೆನಪಿಸಿಕೊಂಡು ಆ ಬಗ್ಗೆ ನಮ್ಮನ್ನು ಕೇಳಿದರು. ಅವರ ಬಿಡುವಿಲ್ಲದ ಕಾರ್ಯಕಲಾಪಗಳ ನಡುವೆಯೂ, ನಮ್ಮ ಯೋಗಕ್ಷೇಮದ ಮೇಲೆ ನೇರವಾಗಿ ಪರಿಣಾಮ ಬೀರುವ ವಿಷಯದ ಬಗ್ಗೆ ಅವರು ಗಮನ ಹರಿಸಿದ್ದರು.

ಟೋಕಿಯೊದಲ್ಲಿ ಪುರುಷರ ಹಾಕಿ ತಂಡವು ಸುದೀರ್ಘ ಕಾಯುವಿಕೆಯ ನಂತರ ಕಂಚು ಗೆದ್ದಾಗ, ಅವರ ಸಾಧನೆಯನ್ನು ಆಚರಿಸಲು ಅವರು ಕೂಡಲೇ ಕೈಚಾಚಿದರು. ಮಹಿಳಾ ತಂಡದಿಂದ ಅಲ್ಪದರಲ್ಲಿ ಪದಕವು ಕೈಜಾರಿದಾಗ, ಮೋದಿ ಅವರು ತಂಡವನ್ನು ಸಂಪರ್ಕಿಸಿ, ಅವರು ಇಡೀ ದೇಶದ ಹೃದಯವನ್ನು ಗೆದ್ದಿರುವುದಾಗಿ ಆತ್ಮವಿಶ್ವಾಸ ತುಂಬಿದರು.

ಕ್ರೀಡಾಪಟುಗಳು ತಮ್ಮದೇ ಆದ ನಿರೀಕ್ಷೆಗಳನ್ನು, ತಮ್ಮ ಕುಟುಂಬಗಳ ತ್ಯಾಗಗಳನ್ನು ಮತ್ತು ರಾಷ್ಟ್ರದ ಭರವಸೆಗಳನ್ನು ಹೊತ್ತುಕೊಂಡಿರುತ್ತಾರೆ. ವೈಫಲ್ಯವು ನೋವಿನ ಸಂಗತಿ ಹೌದು ಅದರಲ್ಲೂ ವಿಶೇಷವಾಗಿ ಅತಿ ಸಣ್ಣ ಅಂತರದಲ್ಲಿ ಹಲವು ವರ್ಷಗಳ ಸಿದ್ಧತೆಯು ವಿಫಲವಾದಾಗ ಆ ತೀವ್ರತೆ ಹೆಚ್ಚು. ಆ ಕ್ಷಣದಲ್ಲಿ ದೊರೆಯುವ ಪ್ರೋತ್ಸಾಹವು ಮತ್ತೆ ಪ್ರಾರಂಭಿಸಲು ಶಕ್ತಿಯನ್ನು ಕಂಡುಕೊಳ್ಳಲು ನಮಗೆ ಸಹಾಯ ಮಾಡುತ್ತದೆ.

ಮೋದಿ ಅವರ ವೈಯಕ್ತಿಕ ಸಂದೇಶಗಳು, ಸಾರ್ವಜನಿಕ ಮನ್ನಣೆ ಮತ್ತು 'ಮನ್ ಕಿ ಬಾತ್'ನಲ್ಲಿ ಕ್ರೀಡಾಪಟುಗಳ ಬಗ್ಗೆ ಅವರು ಮಾಡುವ ಉಲ್ಲೇಖಗಳಿಂದಾಗಿ, ಕಡಿಮೆ ಪ್ರಚಾರ ಪಡೆಯುವ ಕ್ರೀಡೆಗಳ ಬಗ್ಗೆಯೂ ಗಮನ ಹೆಚ್ಚಿದೆ. ಮಹಿಳಾ ಕ್ರೀಡಾಪಟುಗಳು ಮತ್ತು ಪ್ಯಾರಾ–ಅಥ್ಲೀಟ್‌ಗಳು ಈ ಒಡನಾಟದ ಪ್ರಮುಖ ಭಾಗವಾಗಿದ್ದಾರೆ. ಇದು ಕ್ರೀಡಾ ಶ್ರೇಷ್ಠತೆಯ ಬಗ್ಗೆ ದೇಶದ ತಿಳಿವಳಿಕೆಯನ್ನು ವಿಸ್ತರಿಸಲು ಸಹಾಯ ಮಾಡುತ್ತದೆ ಮತ್ತು ಭಾರತದಾದ್ಯಂತದ ಮನೆಗಳಿಗೆ ಹೊಸ ಆದರ್ಶ ವ್ಯಕ್ತಿಗಳನ್ನು ತರುತ್ತದೆ.

25 ವರ್ಷಗಳ ಅವಧಿಯಲ್ಲಿ, ಮೋದಿ ಅವರು ಕ್ರೀಡಾ ಕನಸುಗಳನ್ನು ಪೋಷಿಸಿದ್ದಾರೆ ಮತ್ತು ಕ್ರೀಡಾಪಟುಗಳು ಆ ಕನಸುಗಳನ್ನು ಬೆನ್ನಟ್ಟುವಾಗ ಅವರ ಜೊತೆ ನಿಂತಿದ್ದಾರೆ. ಖೋಖರಾ ಕ್ರೀಡಾ ಸಂಕೀರ್ಣದಲ್ಲಿ ಕಾಣಿಸಿಕೊಂಡ ಮಗುವಿನಿಂದ ಹಿಡಿದು ಭಾರತದ ತ್ರಿವರ್ಣ ಧರಿಸಿದ ಚಾಂಪಿಯನ್ ಆಗುವವರೆಗಿನ ನನ್ನ ಸ್ವಂತ ಪಯಣದಲ್ಲಿ ಆ ನಿರಂತರತೆಯನ್ನು ನಾನು ನೋಡುತ್ತಿದ್ದೇನೆ. ಅವರ ಪ್ರೋತ್ಸಾಹವು ನಮ್ಮನ್ನು ಸುಧಾರಿಸಿಕೊಳ್ಳಲು ಮತ್ತು ದೇಶಕ್ಕಾಗಿ ನಮ್ಮ ಅತ್ಯುತ್ತಮವಾದುದನ್ನು ನೀಡಲು ನಮ್ಮನ್ನು ಪ್ರೇರೇಪಿಸುತ್ತದೆ.ಭಾರತವು 2036ರ ಒಲಿಂಪಿಕ್ಸ್‌ಗೆ ಆತಿಥ್ಯ ವಹಿಸಲು ಮತ್ತು ಜಾಗತಿಕ ಕ್ರೀಡಾ ಶಕ್ತಿಯಾಗಲು ಆಶಿಸುತ್ತಿರುವಾಗ, ಮೋದಿ ಅವರು ಮೈಗೂಡಿಸಿಕೊಂಡಿರುವ ಉತ್ಸಾಹವು ನಮ್ಮೆಲ್ಲರಿಗೂ ಸ್ಫೂರ್ತಿದಾಯಕ: ಹೀಗೆಯೇ ನಮ್ಮ ಕ್ರೀಡಾಪಟುಗಳ ಮೇಲೆ ನಂಬಿಕೆ ಇಡುವುದನ್ನು ಮುಂದುವರಿಸಿ, ಅವರ ಕನಸುಗಳನ್ನು ಬೆಂಬಲಿಸುತ್ತೀರಿ ಮತ್ತು ಟೀಮ್ ಇಂಡಿಯಾವನ್ನು ಸದಾ ಹುರಿದುಂಬಿಸಿ.

# ಪ್ರಜಾಪ್ರಭುತ್ವದ ಪಾಠಕ್ಕೆ ಯುವ ಸಂಸತ್ ವೇದಿಕೆ



**ಸ್ಕಂದಗಿರಿ ವಾಣಿ ಸುದ್ದಿಜಾಲ**
**ಭಾಗ್ಯನಗರ:** ವಿದ್ಯಾರ್ಥಿಗಳು ಸಂಸತ್ತಿನ ಮಹತ್ವವನ್ನು ಅರಿತು, ಸಂಸದೀಯ ಪ್ರಜಾಪ್ರಭುತ್ವದ ಕಾರ್ಯವೈಖರಿ ಹಾಗೂ ಸಂವಿಧಾನದ ಆಶಯಗಳನ್ನು ತಿಳಿದುಕೊಂಡು ಭವಿಷ್ಯದಲ್ಲಿ ಜವಾಬ್ದಾರಿಯುತ ನಾಗರಿಕರಾಗಿ ರೂಪುಗೊಳ್ಳಬೇಕು ಎಂದು ತಹಸೀಲ್ದಾರ್ ಮನೀಶಾ ಮಹೇಶ್ ಪತ್ರಿ ಹೇಳಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ತಾಲ್ಲೂಕು ಮಟ್ಟದ ಯುವ ಸಂಸತ್ ಕಾರ್ಯಕ್ರಮದ ಉದ್ಘಾಟನೆ ಮಾಡಿ ಮಾತನಾಡಿದ ಅವರು ತಾಲ್ಲೂಕು ಮಟ್ಟದಲ್ಲಿ ನಡೆಯುತ್ತಿರುವ ಯುವ ಸಂಸತ್ ಕಾರ್ಯಕ್ರಮವು ರಾಜ್ಯ ಮಟ್ಟದಲ್ಲಿಯೂ ಪ್ರತಿಧ್ವನಿಸುವಂತಾಗಬೇಕು. ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ, ವಿಚಾರ ಮಂಡಿಸುವ ಸಾಮರ್ಥ್ಯ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳ ಕುರಿತು ಅರಿವು ಮೂಡಿಸುವಲ್ಲಿ ಯುವ ಸಂಸತ್ ಪ್ರಮುಖ ಪಾತ್ರ ವಹಿಸುತ್ತದೆ ಎಂದರು.

ಸಭಾಧ್ಯಕ್ಷರ ನೇತೃತ್ವದಲ್ಲಿ ನಡೆದ ಯುವ ಸಂಸತ್ ಸಮಾವೇಶದಲ್ಲಿ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿ, ಪ್ರಶ್ನೋತ್ತರ, ಚರ್ಚೆ ಹಾಗೂ ವಿಚಾರ ಮಂಡನೆಗಳ ಮೂಲಕ ಸಂಸತ್ತಿನ ಕಲಾಪವನ್ನು ಅತ್ಯುತ್ತಮವಾಗಿ ನಡೆಸಿಕೊಟ್ಟರು. ವಿದ್ಯಾರ್ಥಿಗಳು ಸಂಸತ್ತಿನಲ್ಲಿ ನಡೆಯುವ ಚರ್ಚೆ, ಪ್ರಶ್ನೋತ್ತರ ಹಾಗೂ ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯನ್ನು ಪ್ರಾಯೋಗಿಕವಾಗಿ

ಅರಿತುಕೊಂಡರು ಬಾಗೇಪಲ್ಲಿ ತಾಲೂಕಿನ ವಿವಿಧ ಶಾಲೆಗಳ ವಿದ್ಯಾರ್ಥಿಗಳು ಯುವ ಸಂಸತ್ ಸಮಾವೇಶದಲ್ಲಿ ಭಾಗವಹಿಸಿದ್ದರು.

ಉತ್ತಮ ಪ್ರದರ್ಶನ ನೀಡಿದ 15 ವಿವಿಧ ಶಾಲೆಗಳ ವಿದ್ಯಾರ್ಥಿಗಳು ಜಿಲ್ಲಾ ಮಟ್ಟದ ಯುವ ಸಂಸತ್ ಸಮಾವೇಶಕ್ಕೆ ಆಯ್ಕೆಯಾಗಿದ್ದಾರೆ. ವಿದ್ಯಾರ್ಥಿಗಳಿಗೆ ಸಂಸತ್ತಿನ ಮಹತ್ವ, ಸಂಸದೀಯ ಪ್ರಜಾಪ್ರಭುತ್ವದ ಕಾರ್ಯವೈಖರಿ, ಸಂವಿಧಾನದ ಆಶಯಗಳು ಹಾಗೂ ನಾಗರಿಕರ ಹಕ್ಕು ಕರ್ತವ್ಯಗಳ ಕುರಿತು ಅರಿವು ಮೂಡಿಸುವ ಉದ್ದೇಶದಿಂದ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಈ ಸಂಧರ್ಭದಲ್ಲಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಎಂ.ನಾಗಮಣಿ, ಕ್ಷೇತ್ರ ಶಿಕ್ಷಣಾಧಿಕಾರಿ ಎನ್. ವೆಂಕಟೇಶಪ್ಪ, ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ಜೆ ಎನ್ ಮಂಜುನಾಥ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ ಮಂಜುಳಾ, ಶಿಕ್ಷಣ ಕ್ಷೇತ್ರ ಸಮನ್ವಯ ಅಧಿಕಾರಿ ಆರ್. ವೆಂಕಟರಾಮಪ್ಪ, ಸಣ್ಣ ನೀರಾವರಿ ಇಲಾಖೆ ಅಭಿಯಂತರ ರಶ್ಮಿ, ಸಮಾಜ ಕಲ್ಯಾಣ ಇಲಾಖೆ ವ್ಯವಸ್ಥಾಪಕ ನಾಗರಾಜ್, ವಕೀಲ ನಾಗಭೂಷಣ, ಸಾಕ್ಷರತ ಎನ್. ಶಿವಪ್ಪ, ಸೇರಿದಂತೆ ಅನೇಕ ಶಾಲಾ ವಿದ್ಯಾರ್ಥಿಗಳು ಹಾಜರಿದ್ದರು.

# ಯುವಕರು ಸಮಾಜ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲಿ–ಎ.ಮಹೇಂದ್ರ ರೆಡ್ಡಿ



**ಸ್ಕಂದಗಿರಿ ವಾಣಿ ಸುದ್ದಿಜಾಲ**
**ಚಿಕ್ಕಬಳ್ಳಾಪುರ:** ಭಾರತ ಸರ್ಕಾರದ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯದ ಕೇಂದ್ರ ಸರ್ಕಾರಿ ಸಂಸ್ಥೆಯಾದ ಮೈ ಭಾರತ್ ಚಿಕ್ಕಬಳ್ಳಾಪುರ ಆಶ್ರಯದಲ್ಲಿ ಚಿಕ್ಕಬಳ್ಳಾಪುರ ಹಾಗೂ ಶಿಡ್ಲಘಟ್ಟ ಬ್ಲಾಕ್‌ಗಳಲ್ಲಿ ಹಮ್ಮಿಕೊಂಡಿದ್ದ ಯೂತ್ ಕ್ಲಬ್ ಅಭಿವೃದ್ಧಿ ಅಭಿಯಾನದ ಮುಕ್ತಾಯ ಸಮಾರಂಭ ಗುರುವಾರ ಯಶಸ್ವಿಯಾಗಿ ನಡೆಯಿತು.

ಅಭಿಯಾನದ ಅಂಗವಾಗಿ ಚಿಕ್ಕಬಳ್ಳಾಪುರದ ಸರ್ಕಾರಿ ಐಟಿಐ ಕಾಲೇಜು ಹಾಗೂ ಶಿಡ್ಲಘಟ್ಟದ ಸರ್ಕಾರಿ ಐಟಿಐ ಕಾಲೇಜಿನಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಮೈ ಭಾರತ್ ಜಿಲ್ಲಾ ಯುವಜನ ಅಧಿಕಾರಿ ಎ. ಮಹೇಂದ್ರ ರೆಡ್ಡಿ ಹಾಗೂ ಆಯಾ ಕಾಲೇಜುಗಳ ಪ್ರಾಂಶುಪಾಲರಾದ ಮುನುಸ್ವಾಮಿ ಗೌಡ ಮತ್ತು ನಾಗರಾಜಪ್ಪ ಕೆ.ಎನ್. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಎ.ಮಹೇಂದ್ರ ರೆಡ್ಡಿ, ಯುವಕರು ಯೂತ್ ಕ್ಲಬ್‌ಗಳ ಮೂಲಕ ಸಂಘಟಿತರಾಗಿ ತಮ್ಮಲ್ಲಿರುವ ಕೌಶಲ್ಯಗಳನ್ನು ಮತ್ತಷ್ಟು ಅಭಿವೃದ್ಧಿಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು. ವೈಯಕ್ತಿಕ ಪ್ರಗತಿಯ ಜೊತೆಗೆ ಸಮಾಜದ ಅಭಿವೃದ್ಧಿಯಲ್ಲಿಯೂ ಯುವಜನರು ಸಕ್ರಿಯವಾಗಿ ಪಾಲ್ಗೊಳ್ಳಬೇಕು.

ಯುವಶಕ್ತಿಯನ್ನು ಸಮಾಜಮುಖಿ ಚಟುವಟಿಕೆಗಳಿಗೆ ಬಳಸಿಕೊಳ್ಳುವುದೇ ಯೂತ್ ಕ್ಲಬ್ ಅಭಿವೃದ್ಧಿ ಅಭಿಯಾನದ ಪ್ರಮುಖ ಉದ್ದೇಶವಾಗಿದೆ ಎಂದು ತಿಳಿಸಿದರು. ಪ್ರಾಂಶುಪಾಲರಾದ ಮುನುಸ್ವಾಮಿ ಗೌಡ ಮಾತನಾಡಿ, 2047ರ ವೇಳೆಗೆ ವಿಕಸಿತ ಭಾರತ ನಿರ್ಮಾಣ ಮಾಡುವ ಗುರಿ ಹೊಂದಿದ್ದು, ಇದಕ್ಕಾಗಿ ಪ್ರತಿಯೊಬ್ಬ ಯುವಕರೂ ಬದ್ಧತೆ ಮತ್ತು ಅಂಕಿತಭಾವ ದಿಂದ ಶ್ರಮಿಸಬೇಕು ಎಂದು ಹೇಳಿದರು.

ದೇಶದ ಭವಿಷ್ಯ ಯುವಜನರ ಕೈಯಲ್ಲಿದ್ದು, ದೇಶ ನಿರ್ಮಾಣದಲ್ಲಿ ಪ್ರತಿಯೊಬ್ಬರೂ ತಮ್ಮದೇ ಆದ ಕೊಡುಗೆ ನೀಡಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಯುವಜನ ಸಂಘಗಳ ಪ್ರತಿನಿಧಿಗಳು ಹಾಗೂ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಉತ್ಸಾಹದಿಂದ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ನೂತನ ಪದಾಧಿಕಾರಿಗಳಿಂದ ಬಿಜೆಪಿ ಸಂಘಟನೆ ಕುಸಿದಿದೆ ಕಾರ್ಯಕರ್ತರ ಸಭೆಯಲ್ಲಿ ರವಿನಾರಾಯಣರೆಡ್ಡಿ ಬೇಸರ



**ಸ್ಕಂದಗಿರಿ ವಾಣಿ ಸುದ್ದಿಜಾಲ**
**ಗೌರಿಬಿದನೂರು:** ತಾಲೂಕಿನಲ್ಲಿ ನೂತನ ಪದಾಧಿಕಾರಿಗಳು ಆಯ್ಕೆಯಾದ ಬಳಿಕ ಬಿಜೆಪಿ ಸಂಘಟನೆ ಕುಸಿದಿದೆ. ಕಾರ್ಯಕ್ರಮಗಳು ಕೇವಲ ಪದಾಧಿಕಾರಿಗಳಿಗೆ ಸೀಮಿತವಾಗಿವೆ. ನಾವು ಕಾರ್ಯಕರ್ತರಾಗಿ ಪಕ್ಷ ಸಂಘಟಿಸುವ ಕೆಲಸ ಮಾಡಬೇಕಿದೆ ಎಂದು ಮಾಜಿ ಬಿಜೆಪಿ ಜಿಲ್ಲಾಧ್ಯಕ್ಷ ಎನ್. ಎಂ.ರವಿನಾರಾಯಣರೆಡ್ಡಿ ಹೇಳಿದರು.

ನಗರದಲ್ಲಿ ಪಕ್ಷದ ಬಿ–ಟೀಂ ಎಂದು ಕರೆಯಲ್ಪಡುವ ಮುಖಂಡರು ಹಾಗೂ ಕಾರ್ಯಕರ್ತರ ಸಭೆಯನ್ನು ಉದ್ದೇಶಿಸಿ ಮಾತನಾಡಿ, ತಾಲೂಕಿನಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ಬಳಿಕ ಪಕ್ಷದ ಸಂಘಟನೆ ಕುಸಿದಿದೆ. ಕಾರ್ಯಕ್ರಮಗಳು ಕೇವಲ ಪದಾಧಿಕಾರಿಗಳಿಗೆ ಸೀಮಿತವಾಗಿವೆ. ನಮ್ಮ ಸಂಘಟನೆಯ ಶಕ್ತಿಯನ್ನು ನಾವು ಅಂಬೇಡ್ಕರ್ ಜಯಂತಿಯನ್ನು ಬೈಕ್ ರ್‍ಯಾಲಿ ಮೂಲಕ ಆಚರಣೆ ಮಾಡಿ ತೋರಿಸಿದ್ದೇವೆ ಎಂದರು.

ನಾವು ಪಕ್ಷದ ಕಾರ್ಯಕರ್ತರಾಗಿ ಹಾಗೂ ಸಿಪಾಯಿಗಳಂತೆ ಪಕ್ಷವನ್ನು ಸಂಘಟಿಸೋಣ, ಬಿಜೆಪಿ ತಾಲ್ಲೂಕಿನಲ್ಲಿ ಸದೃಢವಾಗಿದೆ ಕಾರ್ಯಕರ್ತರಲ್ಲಿ ಆತ್ಮವಿಶ್ವಾಸ ಮೂಡಿಸುವ ಕೆಲಸ ಮಾಡಬೇಕಿದೆ. ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಗೆ ಪಕ್ಷ ಸಜ್ಜಾಗಬೇಕು, ಪದಾಧಿಕಾರಿಗಳು ಯಾರೇ ಇರಲಿ, ನಾವು ಕಾರ್ಯಕರ್ತರನ್ನು ಗಟ್ಟಿಗೊಳಿಸಿ ಪಕ್ಷವನ್ನು ಸಂಘಟಿಸೋಣ ಎಂದು ಹೇಳಿದರು.

ಮಾನಸ ಸಮೂಹ ಸಂಸ್ಥೆಗಳ ಅಧ್ಯಕ್ಷ ಹಾಗೂ ಬಿಜೆಪಿ ಮುಖಂಡ ಎಚ್. ಎಸ್.ಶಶಿಧರ್ ಮಾತನಾಡಿ, ಪ್ರಸ್ತುತ ರಾಜ್ಯದಲ್ಲಿರುವ ಸರ್ಕಾರ ಸಂಪೂರ್ಣ ವೈಫಲ್ಯವಾಗಿದೆ, ಭ್ರಷ್ಟಾಚಾರ, ನಿರುದ್ಯೋಗ ತಾಂಡವವಾಡುತ್ತಿದೆ ಜನಸಾಮಾನ್ಯರು ಚುನಾವಣೆಗಾಗಿ ಕಾಯುತ್ತಿದ್ದಾರೆಂದರು.

ಜಿ.ಪಂ ಮಾಜಿ ಸದಸ್ಯ ವೇಮಾರೆಡ್ಡಿ, ಮುಖಂಡರಾದ ಬಿ.ಎನ್.ರಂಗನಾಥ್, ಭರತ್ ರೆಡ್ಡಿ, ನಾರಾಯಣರೆಡ್ಡಿ, ಮುನಿಲಕ್ಷ್ಮಮ್ಮ, ರಂಗನಾಥಗೌಡ, ಸುಧಾಕರ್ ಇದ್ದರು.

# ಗ್ರಾಪಂ ನೌಕರರಿಂದ ಸರ್ಕಾರದ ವಿರುದ್ಧ ಹೋರಾಟದ ಕಹಳೆ ವರ್ಷಗಳ ಸೇವೆಗೆ ಬೆಲೆ ಯಾವಾಗ ಕಡಿಮೆ ವೇತನದ ವಿರುದ್ಧ ಗ್ರಾಪಂ ನೌಕರರ ಹೋರಾಟ



**ಸ್ಕಂದಗಿರಿ ವಾಣಿ ಸುದ್ದಿಜಾಲ**
**ಚಿಕ್ಕಬಳ್ಳಾಪುರ:** ಗ್ರಾಮ ಪಂಚಾಯಿತಿಗಳಲ್ಲಿ ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ನೌಕರರು ತಮ್ಮ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಹೋರಾಟದ ಹಾದಿ ಹಿಡಿದಿದ್ದಾರೆ. ಕಾಯಕಯೋಗಿ, ನಡೆದಾಡುವ ದೇವರು ಡಾ. ಶ್ರೀ ಶಿವಕುಮಾರ ಸ್ವಾಮೀಜಿಯವರ ಪಾವನ ಸಿದ್ದಗಂಗಾ ಮಠದ ನೆಲದಿಂದ ಪಾದಯಾತ್ರೆ ಆರಂಭಿಸಿರುವ ನೌಕರರು, ಸರ್ಕಾರ ತಮ್ಮ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿದ್ದಾರೆ. ಕಡಿಮೆ ವೇತನ, ಸೇವಾ ಭದ್ರತೆಯ ಕೊರತೆ ಸೇರಿದಂತೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ ಎಂದು ಅಳಲು ತೋಡಿಕೊಂಡಿದ್ದಾರೆ.

ಗ್ರಾಮೀಣ ಜನರ ದೈನಂದಿನ ಮೂಲಸೌಕರ್ಯ, ಕುಡಿಯುವ ನೀರು, ಪ್ರಕೃತಿ ವಿಕೋಪ ನಿರ್ವಹಣೆ ಸೇರಿದಂತೆ ಗ್ರಾಮ ಪಂಚಾಯಿತಿ ಆಡಳಿತದ ವಿವಿಧ ಕೆಲಸಗಳನ್ನು ಹಗಲಿರುಳು ನಿರ್ವಹಿಸುತ್ತಿರುವ ನೌಕರರ ಬದುಕೇ ಇಂದು ಸಂಕಷ್ಟದಲ್ಲಿದೆ ಎಂಬ ಆರೋಪ ಕೇಳಿಬಂದಿದೆ. ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದರೂ ಕಡಿಮೆ ವೇತನದಲ್ಲಿ ಕೆಲಸ ಮಾಡಬೇಕಾದ ಪರಿಸ್ಥಿತಿ ಇದೆ. ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಆಡಳಿತ ಮಂಡಳಿಗೆ ಸಹಕರಿಸುವುದರ ಜೊತೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿವಿಧ ಕೆಲಸಗಳನ್ನೂ ನಿರ್ವಹಿಸುತ್ತಿದ್ದೇವೆ ಎಂದು ನೌಕರರು ಹೇಳಿದ್ದಾರೆ. ತಮ್ಮ ಸೇವೆಯಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ರಾಜ್ಯ ಹಾಗೂ ರಾಷ್ಟ್ರಮಟ್ಟದ ಪ್ರಶಸ್ತಿಗಳು ದೊರೆತಿದ್ದರೂ, ಗ್ರಾಮ ಪಂಚಾಯಿತಿ ಸಿಬ್ಬಂದಿಗೆ ಮಾತ್ರ ಸಮರ್ಪಕ ವೇತನ ಪರಿಷ್ಕರಣೆ ಆಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಹೀಗಾಗಿ ತಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸಿದ್ದಗಂಗಾ ಮಠದಿಂದ ಪಾದಯಾತ್ರೆ ಮೂಲಕ ಹೋರಾಟದ ಎಚ್ಚರಿಕೆ ನೀಡಿದರು. ತಮ್ಮ ಹಲವು ವರ್ಷಗಳ ಸೇವೆಗೆ ಸೂಕ್ತ ಮನ್ನಣೆ ಹಾಗೂ ಜೀವನ ಭದ್ರತೆ ಕಲ್ಪಿಸಬೇಕು ಎಂದು ಒತ್ತಾಯಿಸಿರುವ ಗ್ರಾಮ ಪಂಚಾಯಿತಿ ನೌಕರರು, ಬೇಡಿಕೆಗಳು ಈಡೇರುವವರೆಗೂ ಹೋರಾಟ ಮುಂದುವರಿಸುವ ಎಚ್ಚರಿಕೆ ನೀಡಿದ್ದಾರೆ.

# ಚಿಕ್ಕಬಳ್ಳಾಪುರದಲ್ಲಿ ಸಿರಿ ಸಂಪದ ಕಾರ್ಯಕ್ರಮ

**ಸ್ಕಂದಗಿರಿ ವಾಣಿ ಸುದ್ದಿಜಾಲ**
**ಚಿಕ್ಕಬಳ್ಳಾಪುರ:** ಕೃಷಿ ವಿಶ್ವವಿದ್ಯಾಲಯದ ಅಂತಿಮ ವರ್ಷದ ವಿದ್ಯಾರ್ಥಿಗಳು ಮೂರು ತಿಂಗಳ ಕಾಲ ತಾಲೂಕಿನ ಕೊಳವನಹಳ್ಳಿಯಲ್ಲಿ ವಾಸ್ತವ್ಯ ಹೂಡಿ, ರೈತರೊಂದಿಗೆ ಬೆರೆತು ವಿವಿಧ ಕೃಷಿ ಚಟುವಟಿಕೆಗಳಲ್ಲಿ ನೇರವಾಗಿ ತೊಡಗಿಸಿಕೊಂಡು ಕೃಷಿ ಪದ್ಧತಿ, ಬೆಳೆ ಬೆಳೆಯುವ ವಿಧಾನ, ರೈತರ ಶ್ರಮ ಹಾಗೂ ಗ್ರಾಮೀಣ ಬದುಕಿನ ಸವಾಲುಗಳನ್ನು ಅರಿತುಕೊಂಡರು. ವಿದ್ಯಾರ್ಥಿಗಳಿಗೆ ಪುಸ್ತಕದ ಜ್ಞಾನಕ್ಕಿಂತ ಹೊಲದ ಅನುಭವ, ರೈತರ ಬದುಕಿನ ಅರಿವು ಮತ್ತು ಆಧುನಿಕ ಕೃಷಿ ತಂತ್ರಜ್ಞಾನಗಳ ಪ್ರಾಯೋಗಿಕ ತಿಳಿವಳಿಕೆ ನೀಡುವ ವೇದಿಕೆಯಾಗಿ ಗಮನ ಸೆಳೆಯಿತು.

ತಾಲೂಕಿನ ಕೊಳವನಹಳ್ಳಿಯಲ್ಲಿ ಗುರುವಾರ ಆಹಾರ ಪೋಷಣೆ ಮತ್ತು ಆಹಾರ ಪದ್ಧತಿ ವಿದ್ಯಾರ್ಥಿಗಳ ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮದ ಅಂಗವಾಗಿ ಬೆಳೆ ಕ್ಷೇತ್ರೋತ್ಸವ, ಕೃಷಿ ವಸ್ತು ಪ್ರದರ್ಶನ ಹಾಗೂ ರೈತ–ವಿಜ್ಞಾನಿಗಳ ಸಂವಾದ ಸಿರಿ ಸಂಪದ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಜಲ ಸಂರಕ್ಷಣಾ ತಂತ್ರಜ್ಞಾನ, ಅಜೋಲಾ ಘಟಕ, ವರ್ಮಿಕಾಂಪೋಸ್ಟ್ ಘಟಕ, ಸುರಕ್ಷಿತ ಕೀಟನಾಶಕ ಬಳಕೆ, ಮೌಲ್ಯವರ್ಧಿತ ಕೃಷಿ ಉತ್ಪನ್ನಗಳು, ವಿವಿಧ ಮೇವು ಬೆಳೆಗಳು, ಶೂನ್ಯ ಶಕ್ತಿ ಶೀತಲೀಕರಣ ಕೊಠಡಿ, ಕೊಳವೆಬಾವಿ ನೀರಿನ ಮರುಪೂರಣ ಮಾದರಿ ಹಾಗೂ ಸಮಗ್ರ ಪೋಷಕಾಂಶ ನಿರ್ವಹಣೆ ಸೇರಿದಂತೆ ಹಲವು ತಂತ್ರಜ್ಞಾನಗಳ ಕುರಿತ ಅರಿವು ನೀಡಲಾಯಿತು.

ಜಿಲ್ಲಾಧಿಕಾರಿ ಜಿ.ಪ್ರಭು, ಕರ್ನಾಟಕ ಮತ್ತು ಒಡಿಶಾ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ಜಸ್ಟಿಸ್ ದೀಕ್ಷಿತ್ ಶ್ರೀಪಾದ್, ಕೃಷಿ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ಮಧುಸೂದನ, ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶ ರಾಮಲಿಂಗೇಗೌಡ, ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮ ಕೃಷಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಸಂಯೋಜಕರಾದ ಡಾ.ಎನ್.ಮಂಜುಳ, ರಾಜ್ಯ ರೈತ ಸಂಘದ ಕಾರ್ಯಾಧ್ಯಕ್ಷ ಭಕ್ತರಹಳ್ಳಿ ಬೈರೇಗೌಡ,

ಬಾರ್ ಕೌನ್ಸಿಲ್ ಆಫ್ ಕರ್ನಾಟಕ ಸದಸ್ಯ ಹರೀಶ್, ಸಹಾಯಕ ಕೃಷಿ ನಿರ್ದೇಶಕ ಮುನಿರಾಜು, ವಕೀಲರ ಸಂಘದ ಜಿಲ್ಲಾಧ್ಯಕ್ಷ ಕೆ.ವಿ.ಅಭಿಲಾಷ್, ವಿದ್ಯಾರ್ಥಿನಿ ಪಂಚಮಿ ಮತ್ತಿತರರು ಇದ್ದರು.

# ಪೊಲೀಸ್ ಪ್ರಕಟಣೆ

**ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, 562105**

ಚಿಕ್ಕಬಳ್ಳಾಪುರ ಜಿಲ್ಲೆ ಶಿಡ್ಲಘಟ್ಟ ಗ್ರಾಮಾಂತರ ಠಾಣೆಯ ಮೊಕದ್ದಮೆ ಸಂಖ್ಯೆ 225/2026ರ ಕಲಂ 103(1), 238,3(5), ಬಿಎನ್‌ಎಸ್–2023. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಶಿಡ್ಲಘಟ್ಟ ತಾಲೂಕು ಹಿತ್ತಲಹಳ್ಳಿಯಲ್ಲಿ ರೈತ ರಮೇಶ್ ಎನ್ನುವವರ ತೋಟದಲ್ಲಿ ನೇಪಾಳ ಮೂಲದ ವಿನೋದ್ ವಯಸ್ಸು 50 ವರ್ಷ, ಕೂಲಿ ಕೆಲಸ ಮಾಡಿಕೊಂಡು ಅಲ್ಲಿಯೆ ಶೆಡ್ ನಿರ್ಮಿಸಿಕೊಂಡು ಶೆಡ್‌ನಲ್ಲಿ ತನ್ನ ಹೆಂಡತಿ ಹಾಗೂ ಮಗನೊಂದಿಗೆ ವಾಸವಿದ್ದರು.

ಆದರೆ 20/8/2026ರಂದು ವಿನೋದ್ ಕೊಲೆಯಾದ ಸ್ಥಿತಿಯಲ್ಲಿ ಕಂಡು ಬಂದಿರುತ್ತಾರೆ. ವಿನೋದ್‌ನ ಹೆಂಡತಿ ಹಾಗೂ ಮಗ ಸೇರಿಕೊಂಡು ಕೊಲೆ ಮಾಡಿ ಪರಾರಿಯಾಗಿರುವ ಶಂಕೆ ವ್ಯಕ್ತವಾಗಿದ್ದು ಈ ಸಂಬಂಧ ವಿನೋದ್‌ನ ಹೆಂಡತಿ(ಹೆಸರು ತಿಳಿದುಬಂದಿಲ್ಲ) ಹಾಗೂ ಮಗ ಅರ್ಜುನ್ ಮೇಲೆ ಪ್ರಕರಣ ದಾಖಲಾಗಿದೆ.

ಕೊಲೆ, ಸಾಕ್ಷಿ ನಾಶದಂತ ಪ್ರಕರಣದಲ್ಲಿ ಭಾಗಿಯಾಗಿರುವ ಶಂಕಿತರು 1ನೇ ಆರೋಪಿ ಹೆಸರು ತಿಳಿದಿರುವುದಿಲ್ಲ. 2ನೇ ಆರೋಪಿ ಅರ್ಜುನ್, ಸುಮಾರು 18 ವರ್ಷ, ಖಾಯಂ ವಿಳಾಸ ನೇಪಾಳ. ಹಾಲಿ ವಾಸ ಹಿತ್ತಲಹಳ್ಳಿ, ಶಿಡ್ಲಘಟ್ಟ ತಾಲ್ಲೂಕು ಈ ಇಬ್ಬರು ಆರೋಪಿಗಳು ಘಟನೆ ನಂತರ ನಾಪತ್ತೆಯಾಗಿದ್ದು ಈ ಕೆಳಗಿನ ಆಸಾಮಿಗಳು ಕಂಡು ಬಂದಲ್ಲಿ ಹತ್ತಿರದ ಪೊಲೀಸ್ ಠಾಣೆಗೆ ಅಥವಾ ತನಿಖಾಧಿಕಾರಿ ಶಿಡ್ಲಘಟ್ಟ ಪೊಲೀಸ್ ವೃತ್ತ ನಿರೀಕ್ಷಕರು, ಮೊಬೈಲ್ ಸಂಖ್ಯೆ 9480802534 ಅಥವಾ ದೂರವಾಣಿ ಸಂಖ್ಯೆ 08158–256509 ಸಂಪರ್ಕಿಸಲು ಪ್ರಕಟಣೆಯಲ್ಲಿ ಕೋರಲಾಗಿದೆ.



**1 ನೇ ಆರೋಪಿ – ಮೃತ ವಿನೋಧ ರವರ ಹೆಂಡತಿ (ಹೆಸರು ತಿಳಿಯಬೇಕಿದೆ) ಸುಮಾರು 40 ವರ್ಷ, ಖಾಯಂ ವಿಳಾಸ ನೇಪಾಳ, ಹಾಲಿ ವಿಳಾಸ ಹಿತ್ತಲಹಳ್ಳಿ, ಶಿಡ್ಲಘಟ್ಟ ತಾಲೂಕು.**



**2 ನೇ ಆರೋಪಿ– ಮೃತ ವಿನೋಧ ರವರ ಮಗ ಅರ್ಜುನ್ ಸುಮಾರು 18 ವರ್ಷ, ಪಾಯಂ ವಿಳಾಸ ನೇಪಾಳ, ಹಾಲಿ ವಿಳಾಸ ಹಿತ್ತಲಹಳ್ಳಿ ಗ್ರಾಮ, ಶಿಡ್ಲಘಟ್ಟ ತಾಲೂಕು.**

# ಚಿಂತಾಮಣಿಯಲ್ಲಿ ಅದ್ಧೂರಿ ದಸರಾ ಉತ್ಸವಕ್ಕೆ ಸಿದ್ಧತೆ ಜಾತಿ ಪಕ್ಷ ಭೇದವಿಲ್ಲದೆ ಎಲ್ಲರಿಗೂ ಮುಕ್ತ ಆಹ್ವಾನ

**ಸ್ಕಂದಗಿರಿ ವಾಣಿ ಸುದ್ದಿಜಾಲ**
**ಚಿಂತಾಮಣಿ:** ಸಾಮೂಹಿಕ ಗಣೇಶೋತ್ಸವ, ಗಂಗಾ ಆರತಿ ಹಾಗೂ ಹಿಂದೂ ಸಮಾಜೋತ್ಸವದ ಮೂಲಕ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿಕೊಂಡು ಬರುತ್ತಿರುವ ಚಿಂತಾಮಣಿಯಲ್ಲಿ, ಈ ಬಾರಿ ದಸರಾ ಹಬ್ಬವನ್ನು ಅದ್ದೂರಿಯಾಗಿ ಆಚರಿಸಲಾಗುತ್ತಿದೆ ಎಂದು ಸತ್ಯನಾರಾಯಣ ಮಹೇಶ್ ರವರು ತಿಳಿಸಿದ್ದಾರೆ.

ಚಿಂತಾಮಣಿ ನಗರದ ಪಾಲಿಟೇಕ್ನೀಕ್ ಮೈದಾನದಲ್ಲಿ ಹಮಿಕೊಂಡಿದ್ದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು ವಸುದೈವ ಕುಟುಂಬಕಂ, ಸರ್ವೇ ಜನಾಃ ಸುಖಿನೋ ಭವಂತು ಎಂಬ ಸಂದೇಶದೊಂದಿಗೆ ಜಾತಿ, ಪಕ್ಷ ಹಾಗೂ ವಯಸ್ಸಿನ ಯಾವುದೇ ಭೇದವಿಲ್ಲದೆ ಭಾರತ ಮಾತೆಯ ಪರವಾಗಿ ನಿಲ್ಲುವ ಎಲ್ಲರೂ ಈ ದಸರಾ ಉತ್ಸವದಲ್ಲಿ ಭಾಗವಹಿಸಬಹುದು ಎಂದು ಆಯೋಜಕರು ತಿಳಿಸಿದ್ದಾರೆ.

ಅಕ್ಟೋಬರ್ 11ರಂದು ಸಂಜೆ 6 ಗಂಟೆಗೆ ದಸರಾ ಉತ್ಸವಕ್ಕೆ ಅಧಿಕೃತ ಚಾಲನೆ ದೊರೆಯಲಿದೆ. ಒಟ್ಟು 9 ದಿನಗಳ ಕಾಲ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಂಗೀತ ಕಾರ್ಯಕ್ರಮಗಳನ್ನು ಇಮ್ಮಿಕೊಳ್ಳಲಾಗಿದೆ. ಪ್ರತಿದಿನ ಹೋಮ ಹವನ, ವಿಶೇಷ ಪೂಜಾ ಕಾರ್ಯಕ್ರಮಗಳು ನಡೆಯಲಿದ್ದು, ಇತ್ತೀಚಿನ ದಿನಗಳಲ್ಲಿ ಸಂಭವಿಸುತ್ತಿರುವ ಅಪಘಾತಗಳು ಹಾಗೂ ಅಹಿತಕರ ಘಟನೆಗಳ ಹಿನ್ನೆಲೆಯಲ್ಲಿ ಮೃತ್ಯುಂಜಯ ಹೋಮ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ದಂಪತಿಗಳ ಸಮೇತ ಭಕ್ತರು ಭಾಗವಹಿಸಲು ಅವಕಾಶವಿದ್ದು, ಯಾವುದೇ ಜಾತಿ ನಿರ್ಬಂಧ ಇರುವುದಿಲ್ಲ ಎಂದು ಆಯೋಜಕರು ಹೇಳಿದ್ದಾರೆ.



ನವರಾತ್ರಿ ಉತ್ಸವದ ಅಂಗವಾಗಿ ಪ್ರತಿದಿನ ರಾತ್ರಿ ಸಂಗೀತ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು, ಮಹಿಳೆಯರಿಗಾಗಿ ಲಲಿತಾ ಸಹಸ್ರನಾಮ ಪಠಣ, ರಾತ್ರಿ ಕೊನೆಯಲ್ಲಿ ದೀಪಾರಾಧನೆ ನಡೆಯಲಿದೆ. ಇದರ ಜೊತೆಗೆ ದಾಂಡಿಯಾ ಹಾಗೂ ಲೇಸರ್ ಶೋ ಕೂಡ ಆಯೋಜಿಸಲಾಗಿದೆ. ಗಣೇಶ ಚತುರ್ಥಿ ಸಂದರ್ಭದಲ್ಲಿ ಚಿಂತಾಮಣಿ ನಗರದಲ್ಲಿ ಗಣೇಶ ಪ್ರತಿಷ್ಠಾಪಿಸಿದ್ದ ವಿವಿಧ ಸಂಘಟನೆಗಳ ಪ್ರತಿನಿಧಿಗಳು ಪ್ರತಿದಿನ ಒಬ್ಬೊಬ್ಬರಂತೆ ವಾಲೆಂಟಿಯರ್ ಆಗಿ ಸೇವೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಲಾಗಿದೆ.

ವಿಶೇಷ ಆಕರ್ಷಣೆಯಾಗಿ ವಾರಾಣಸಿಯಿಂದ ಗಣೇಶ, ದುರ್ಗಾದೇವಿ ಹಾಗೂ ನರಸಿಂಹಸ್ವಾಮಿ ಸೇರಿದಂತೆ ಮೂರು ವಿಗ್ರಹಗಳನ್ನು ತರಿಸಿ ಪ್ರತಿಷ್ಠಾಪಿಸಲಾಗುವುದು. ಮಾತಾ ಭಾರತಿ ಮಂಗಳಂ ಎಂಬ ಹೆಸರಿನಲ್ಲಿ ವಿಶೇಷ ಮಂಟಪ ನಿರ್ಮಿಸಲಾಗುತ್ತಿದೆ. ಈ ದಸರಾ ಉತ್ಸವದಲ್ಲಿ ಶಾಸಕ ಡಾ.ಎಂ.ಸಿ.ಸುಧಾಕರ್, ಮಾಜಿ ಶಾಸಕ ಜೆ.ಕೆ.ಕೃಷ್ಣಾರೆಡ್ಡಿ, ಬಿಜೆಪಿ ಮುಖಂಡ ದೇವನಹಳ್ಳಿ ವೇಣುಗೋಪಾಲ್ ಸೇರಿದಂತೆ ವಿವಿಧ ಪಕ್ಷಗಳ ಮುಖಂಡರು ಪಕ್ಷಾತೀತವಾಗಿ ಹಾಗೂ ಜಾತ್ಯತೀತವಾಗಿ ಭಾಗವಹಿಸಲಿದ್ದಾರೆ ಎಂದು ಬಿಜೆಪಿ ಮುಖಂಡ ಸತ್ಯನಾರಾಯಣ ಮಹೇಶ್ ತಿಳಿಸಿದ್ದಾರೆ.

ಚಿಂತಾಮಣಿಯಲ್ಲಿ ಪ್ರಪ್ರಥಮ ಬಾರಿಗೆ ಈ ರೀತಿಯ ಅದ್ದೂರಿ ದಸರಾ ಉತ್ಸವವನ್ನು ಆಯೋಜಿಸಲಾಗುತ್ತಿದ್ದು, ತಾಲ್ಲೂಕಿನ ಯುವಕ ಯುವತಿಯರು ಸೇರಿದಂತೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಕಣ್ತುಂಬಿಕೊಳ್ಳುವಂತೆ ಅವರು ಮನವಿ ಮಾಡಿದ್ದಾರೆ.

ಇನ್ನು ದಸರಾ ವಿಸರ್ಜನಾ ದಿನದಂದು ಚಿಂತಾಮಣಿ ನಗರದಲ್ಲಿ ಸ್ವಯಂ ಘೋಷಿತ ಬಂದ್ ಆಚರಿಸುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಲಾಗಿದೆ. ಈ ಕುರಿತು ಮಾತನಾಡಿದ ಗೋಪಿ, ನವರಾತ್ರಿ ಉತ್ಸವವನ್ನು ನಮ್ಮೂರಿನ ಹಬ್ಬ, ನಮ್ಮ ಮನೆಯ ಹಬ್ಬದ ವಾತಾವರಣದಲ್ಲಿ ಆಚರಿಸಬೇಕು. ಇದು ಯಾವುದೇ ಆಡಂಬರ ಅಥವಾ ತೋರಿಕೆಗಾಗಿ ನಡೆಸುತ್ತಿರುವ ಕಾರ್ಯಕ್ರಮವಲ್ಲ. ನಾವೆಲ್ಲರೂ ಒಂದು ಎಂಬ ಸಂದೇಶವನ್ನು ಸಾರುವುದೇ ಈ ಉತ್ಸವದ ಪ್ರಮುಖ ಉದ್ದೇಶ ಎಂದು ತಿಳಿಸಿದರು.

ಉತ್ಸವದ ಅಂಗವಾಗಿ ಸರಿಗಮಪ ಕಾರ್ಯಕ್ರಮ ಸೇರಿದಂತೆ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಮುಂದಿನ ದಿನಗಳಲ್ಲಿ ದೀಪಾವಳಿಯನ್ನೂ ಸಾಮೂಹಿಕವಾಗಿ ಆಚರಿಸುವ ಉದ್ದೇಶ ಹೊಂದಲಾಗಿದೆ ಎಂದು ಅವರು ಹೇಳಿದರು. ಒಟ್ಟಿನಲ್ಲಿ ಧಾರ್ಮಿಕ ಭಕ್ತಿ, ಸಾಂಸ್ಕೃತಿಕ ವೈಭವ ಹಾಗೂ ಸಾಮಾಜಿಕ ಒಗ್ಗಟ್ಟಿನ ಸಂದೇಶದೊಂದಿಗೆ ಚಿಂತಾಮಣಿಯಲ್ಲಿ ನಡೆಯಲಿರುವ 9 ದಿನಗಳ ದಸರಾ ಉತ್ಸವಕ್ಕೆ ಭರ್ಜರಿ ಸಿದ್ಧತೆ ನಡೆಯುತ್ತಿದೆ.

ಈ ಸಂದರ್ಭದಲ್ಲಿ ಎಲ್ಲಾ ಮುಖಂಡರು, ಸಾರ್ವಜನಿಕರು ಮತ್ತಿತ್ತರರು ಉಪಸ್ಥಿತಿರಿದ್ದರು.

# ರೈತರ ಅಭಿವೃದ್ಧಿಗೆ ಕೃಷಿ ವಿದ್ಯಾರ್ಥಿಗಳ ಜ್ಞಾನ ಪೂರಕ ಕೃಷಿ ಕಲರವ ಕಾರ್ಯಕ್ರಮದಲ್ಲಿ ಗಗನಸಿಂಧು ಅಭಿಮತ



**ಸ್ಕಂದಗಿರಿ ವಾಣಿ ಸುದ್ದಿಜಾಲ**

ಶಿಡ್ಲಘಟ್ಟ: ರೈತರ ಅಭಿವೃದ್ಧಿ ಹಾಗೂ ಕೃಷಿ ಕ್ಷೇತ್ರದ ಪ್ರಗತಿಗೆ ಸದಾ ಆದ್ಯತೆ ನೀಡಲಾಗುವುದು ಎಂದು ತಹಶೀಲ್ದಾರ್ ಗಗನಸಿಂಧು.ಎನ್ ತಿಳಿಸಿದರು. ತಾಲ್ಲೂಕಿನ ಜಂಗಮಕೋಟೆ ಹೋಬಳಿಯ ಬಳುವನಹಳ್ಳಿ ಗ್ರಾಮದಲ್ಲಿ ಜಿಕೆವಿಕೆ ವಿದ್ಯಾರ್ಥಿಗಳು ಆಯೋಜಿಸಿದ್ದ ಕೃಷಿ ಕಲರವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕೃಷಿ ಕ್ಷೇತ್ರದ ಬೆಳವಣಿಗೆಗೆ ರೈತರ ಜ್ಞಾನ, ಆಧುನಿಕ ಕೃಷಿ ಪದ್ಧತಿಗಳ ಅಳವಡಿಕೆ ಹಾಗೂ ಕೃಷಿ ಸಂಬಂಧಿತ ಮಾಹಿತಿಗಳ ವಿನಿಮಯ ಮಹತ್ವದ ಪಾತ್ರ ವಹಿಸುತ್ತವೆ.

ಕೃಷಿ ಕ್ಷೇತ್ರದಲ್ಲಿ ಎದುರಾಗುವ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ರೈತರು ಹಾಗೂ ಕೃಷಿ ವಿದ್ಯಾರ್ಥಿಗಳ ನಡುವಿನ ಸಂವಾದಗಳು ಸಹಕಾರಿಯಾಗಲಿವೆ ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಕುರಿತು ಮಾಹಿತಿ ವಿನಿಮಯ ನಡೆಯಿತು.

ರೈತರೊಂದಿಗೆ ಸಂವಾದ ನಡೆಸಿ, ಕೃಷಿ ಚಟುವಟಿಕೆಗಳು, ರೈತರ ಸಮಸ್ಯೆಗಳು ಹಾಗೂ ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದ ವಿಚಾರಗಳ ಕುರಿತು ಚರ್ಚಿಸಲಾಯಿತು.

ಕೃಷಿ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶಗಳಿಗೆ ಭೇಟಿ ನೀಡಿ ರೈತರೊಂದಿಗೆ ಬೆರೆತು, ಕೃಷಿ ಕ್ಷೇತ್ರದ ವಾಸ್ತವಿಕ ಪರಿಸ್ಥಿತಿಯನ್ನು ಅರಿತುಕೊಳ್ಳುವ ಇಂತಹ ಕಾರ್ಯಕ್ರಮಗಳು ಕೃಷಿ ಮತ್ತು ರೈತರ ಅಭಿವೃದ್ಧಿಗೆ ಪೂರಕವಾಗಿವೆ.

ಕಾರ್ಯಕ್ರಮದಲ್ಲಿ ಸ್ಥಳೀಯ ರೈತರು ಸೇರಿದಂತೆ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ತೀವ್ರಗೊಳಿಸಿ: ಭೀಮಮಾರ್ಗ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಶಿಡ್ಲಘಟ್ಟ :** ಶೋಷಿತರು, ದಮನಿತರು ಹಾಗೂ ಬಡವರ ಪರವಾಗಿ ಧ್ವನಿ ಎತ್ತಿ, ಸಾಮಾಜಿಕ ನ್ಯಾಯಕ್ಕಾಗಿ ನಿರಂತರವಾಗಿ ಹೋರಾಟ ನಡೆಸುವ ಮೂಲಕ ಭೀಮಮಾರ್ಗ ಸಂಘಟನೆಯನ್ನು ಮತ್ತಷ್ಟು ಬಲಪಡಿಸಬೇಕು ಎಂದು ದಲಿತ ಸಂಘರ್ಷ ಸಮಿತಿ ಭೀಮಮಾರ್ಗದ ರಾಜ್ಯಾಧ್ಯಕ್ಷ ಡಾ.ಬಿ.ಎನ್.ವೆಂಕಟೇಶ್ ಹೇಳಿದರು.




ನಗರದ ಭೀಮಮಾರ್ಗ ಕಚೇರಿಯಲ್ಲಿ ನಡೆದ ಶಿಡ್ಲಘಟ್ಟ ತಾಲ್ಲೂಕು ಹಾಗೂ ಹೋಬಳಿ ಮಟ್ಟದ ನೂತನ ಪದಾಧಿಕಾರಿಗಳ ಆಯ್ಕೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ನೂತನ ಪದಾಧಿಕಾರಿಗಳು ಶೋಷಿತರು ಹಾಗೂ ದಮನಿತರ ಪರವಾಗಿ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ಗ್ರಾಮೀಣ ಪ್ರದೇಶಗಳಲ್ಲಿರುವ ಬಡವರು ಸರ್ಕಾರದಿಂದ ಪಡೆಯಬೇಕಾದ ಮೂಲಸೌಲಭ್ಯಗಳು ಹಾಗೂ ವಿವಿಧ ಯೋಜನೆಗಳ ಪ್ರಯೋಜನ ಪಡೆಯಲು ಅಗತ್ಯ ಸಹಕಾರ ನೀಡಬೇಕು ಎಂದು ಹೇಳಿದರು.

ಪದಾಧಿಕಾರಿಗಳ ಆಯ್ಕೆ ನೂತನ ತಾಲ್ಲೂಕು ಸಂಚಾಲಕರಾಗಿ ಪ್ರಶಾಂತ್ ಆಯ್ಕೆಯಾದರೆ ನಿತಿನ್, ದೀಕ್ಷಿತ್ ಹಾಗೂ ಗುರುಚರಣ್ ಅವರನ್ನು ಸಂಘಟನಾ ಸಂಚಾಲಕರಾಗಿ, ನಿಖಿಲ್ ಕಾರ್ಯದರ್ಶಿಯಾಗಿ, ಸಂಜಯ್ ಖಜಾಂಚಿಯಾಗಿ ಹಾಗೂ ಉದಯ್‌ಕಿರಣ್ ರನ್ನು ಪ್ರಧಾನ ಕಾರ್ಯದರ್ಶಿಯಾಗಿ ನೇಮಕ ಮಾಡಲಾಯಿತು.

ವೆಂಕಟಸ್ವಾಮಿ ಅವರನ್ನು ಹಿರಿಯ ಮುಖಂಡರಾಗಿ ಹಾಗೂ ಯಾಸ್ಮಿನ್ ಅವರನ್ನು ಮಹಿಳಾ ನಗರ ಸಂಚಾಲಕರಾಗಿ ನೇಮಿಸಿ ನೇಮಕಾತಿ ಪತ್ರಗಳನ್ನು ವಿತರಿಸಲಾಯಿತು.

ಬೆಳಗಾವಿಯಲ್ಲಿ ಇದೇ ತಿಂಗಳು ನಡೆಯಲಿರುವ ಭೀಮಮಾರ್ಗ ಸಂಘಟನೆಯ ಕಾರ್ಯಕ್ರಮದಲ್ಲಿ ಬಾಬಾಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರ ಜೀವನ, ಹೋರಾಟ ಹಾಗೂ ವಿಚಾರಧಾರೆ ಕುರಿತು ನಾಟಕ ಪ್ರದರ್ಶಿಸಿ ಸಾಮಾಜಿಕ ಜಾಗೃತಿ ಮೂಡಿಸಲಾಗುವುದು ಎಂದು ತಿಳಿಸಿದರು.

ರಾಜ್ಯ ಸಂಘಟನಾ ಸಂಚಾಲಕಿ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ನಾಗವೇಣಿ ಮಾತನಾಡಿ, ಸಂಘಟನೆಯನ್ನು ಬಲಪಡಿಸುವ ಉದ್ದೇಶದಿಂದ ಯುವಕರಿಗೆ ಜವಾಬ್ದಾರಿ ನೀಡಲಾಗಿದೆ. ಗ್ರಾಮೀಣ ಮಟ್ಟದಲ್ಲಿ ಜನರ ಸಮಸ್ಯೆಗಳನ್ನು ಗುರುತಿಸಿ, ಅಗತ್ಯವಿರುವ ಕಡೆ ಸಂಘಟನಾತ್ಮಕವಾಗಿ ಹೋರಾಟ ನಡೆಸಲಾಗುವುದು ಎಂದರು.

ರಾಜ್ಯ ಸಮಿತಿ ಸದಸ್ಯ ನರಸಿಂಹಮೂರ್ತಿ, ಜಿಲ್ಲಾ ಅಧ್ಯಕ್ಷ ಮಳ್ಳೂರು ದ್ಯಾವಪ್ಪ, ಜಿಲ್ಲಾ ಖಜಾಂಚಿ ಶಿವಣ್ಣ, ಜಿ.ಆರ್.ವೆಂಕಟೇಶ್, ಸಂಘಟನಾ ಸಂಚಾಲಕಿ ಗಾಯತ್ರಮ್ಮ, ಸಂಚಾಲಕಿ ಕದಿರಮ್ಮ ಸೇರಿ ರಾಜ್ಯ, ಜಿಲ್ಲಾ, ತಾಲ್ಲೂಕು ಹಾಗೂ ಹೋಬಳಿ ಮಟ್ಟದ ಪದಾಧಿಕಾರಿಗಳು ಭಾಗವಹಿಸಿದ್ದರು.

# ಬೊಡಗುಂಡ್ಲಹಳ್ಳಿಯಲ್ಲಿ ಪೊಲೀಸರ ಭರ್ಜರಿ ದಾಳಿ ನಾಡಬಾಂಬ್‌ಗಳ ದಾಸ್ತಾನು ಸೀಜ್ ಆರೋಪಿ ಅರೆಸ್ಟ್



**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಂತಾಮಣಿ:** ತಾಲ್ಲೂಕಿನ ಬಟ್ಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಬೋಡಗುಂಡ್ಲಹಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ 150 ನಾಡಬಾಂಬುಗಳು ಹಾಗೂ ಒಂದು ನಾಡಬಂದೂಕನ್ನು ಪೊಲೀಸರು ವಶಕ್ಕೆ ಪಡೆದು, 35 ವರ್ಷದ ನರಸಿಂಹಪ್ಪ ಎಂಬಾತನನ್ನು ಬಂಧಿಸಿದ್ದಾರೆ.

ತಾಲ್ಲೂಕಿನ ಮುರಗಮಲ್ಲೆ ಹೋಬಳಿ ಪೆದ್ದೂರು ಗ್ರಾಮ ಪಂಚಾಯಿತಿ ಬೋಡಗುಂಡ್ಲಹಳ್ಳಿ ಗ್ರಾಮದ ನರಸಿಂಹಪ್ಪ ತನ್ನ ಮನೆಯಲ್ಲೇ ಅಕ್ರಮವಾಗಿ ಒಂದು ನಾಡಬಂದೂಕು ಹಾಗೂ 150ಕ್ಕೂ ಹೆಚ್ಚು ನಾಡಬಾಂಬುಗಳನ್ನು ಸಂಗ್ರಹಿಸಿಟ್ಟಿರುವ ಬಗ್ಗೆ ಪೊಲೀಸರಿಗೆ ಖಚಿತ ಮಾಹಿತಿ ಲಭ್ಯವಾಗಿತ್ತು.

ಮಾಹಿತಿ ಆಧರಿಸಿ ಕೆಂಚಾರ್ಲಹಳ್ಳಿ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ನಾರಾಯಣಸ್ವಾಮಿ ಹಾಗೂ ಬಟ್ಲಹಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐ ಶಿವಕುಮಾರ್, ಎಎಸ್‌ಐ ಮುಕ್ತಿಯಾರ್ ಪಾಷಾ ನೇತೃತ್ವದ ಪೊಲೀಸ್ ತಂಡ ಈ ದಾಳಿ ನಡೆಸಿದೆ.

ದಾಳಿ ವೇಳೆ ಮನೆಯಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ ಒಂದು ನಾಡಬಂದೂಕು ಹಾಗೂ 150ಕ್ಕೂ ಹೆಚ್ಚು ನಾಡ ಬಾಂಬುಗಳನ್ನು ವಶಕ್ಕೆ ಪಡೆಯಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ನರಸಿಂಹಪ್ಪನನ್ನು ಪೊಲೀಸರು ವಶಕ್ಕೆ ಪಡೆದು ಬಂಧಿಸಿದ್ದಾರೆ.

ಬಂಧಿತ ಆರೋಪಿಯನ್ನು ಚಿಂತಾಮಣಿ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆಗೆ ಒಳಪಡಿಸಿದ ಬಳಿಕ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಪ್ರಕರಣದ ಕುರಿತು ಬಟ್ಲಹಳ್ಳಿ ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

# ರೈತರ ಜಮೀನಿನ ವ್ಯವಹಾರದಲ್ಲಿ ಅಕ್ರಮದ ಆರೋಪ ಶಾಸಕ ಸುಬ್ಬಾರೆಡ್ಡಿ ವಿರುದ್ಧ ಹರಿನಾಥರೆಡ್ಡಿ ವಾಗ್ದಾಳಿ




**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಭಾಗ್ಯನಗರ:** ಶಾಸಕರ ಬಂದುಗಳಿಗೆ ಸೇರಿದ ಸಂಸ್ಥೆ ರೈತರಿಂದ ಕಡಿಮೆ ಬೆಲೆಗೆ ಜಮೀನು ಖರೀದಿಸಿ ಅದನ್ನು ಸರ್ಕಾರಕ್ಕೆ ಹೆಚ್ಚಿನ ಬೆಲೆಗೆ ಮಾರಿ, ರೈತರಿಗೆ ಸಿಗಬೇಕಾಗಿದ್ದ ಹಣವನ್ನು ಪಡೆಯುತ್ತಿದ್ದಾರೆ ಎಂದು ಎನ್.ಡಿ.ಎ. ಮುಖಂಡ ಹರಿನಾಥರೆಡ್ಡಿ ಶಾಸಕ ಸುಬ್ಬಾರೆಡ್ಡಿ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ.

ಪಟ್ಟಣದ ಪತ್ರಕರ್ತರ ಭವನದಲ್ಲಿ ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಗಂಟ್ಲಮಲ್ಲಮ್ಮ ಕಣಿವೆಯಲ್ಲಿ ಒಂದು ಡ್ಯಾಂ ಕಟ್ಟಲು ಸರ್ಕಾರದಿಂದ ಅನುಮೋಧನೆ ಪಡೆದು, ಸುಮಾರು 180 ಕೋಟಿ ಅನುದಾನ ಬಿಡುಗಡೆ ಮಾಡಿಸಿರುವುದು ಒಳ್ಳೆಯದೆ ಅದನ್ನು ಶ್ಲಾಘಿಸುತ್ತೇನೆ. ಆದರೆ ಡ್ಯಾಂ ನಿರ್ಮಾಣ ಮಾಡಲು ಬೇಕಾಗಿದ್ದ ಜಮೀನುಗಳನ್ನು ರೈತರಿಂದ ಕಡಿಮೆ ಬೆಲೆಗೆ ಶ್ರೀ ಸಾಯಿ ಎಂಟರ್‌ಪ್ರೆಸಸ್ ವತಿಯಿಂದ ಖರೀಧಿಸಿ, ಅದನ್ನು ಸರ್ಕಾರಕ್ಕೆ ಹೆಚ್ಚಿನ ಬೆಲೆಗೆ ಮಾರಿ, ರೈತರಿಗೆ ಹೋಗಬೇಕಾಕಿದ್ದ ಹಣವನ್ನು ತಾವು ಪಡೆಯುತ್ತಿರುವುದು ಸರಿಯಲ್ಲ.

ಶಾಸಕ ಸುಬ್ಬಾರೆಡ್ಡಿಯವರು ಇಲ್ಲಿ ಸಮಾಜಸೇವೆ ಹೆಸರಿನಲ್ಲಿ ಬಂದು ಶಾಸಕರಾಗಿ ಈಗ ಬಿಸಿನೆಸ್ ಮಾಡುತ್ತಿದ್ದಾರೆ. ರೈತರಿಂದ ಜಮೀನನ್ನು ಕಡಿಮೆ ಧರಕ್ಕೆ ತಮ್ಮ ಬಂಧುಗಳ ಹೆಸರಿನ ಶ್ರೀ ಸಾಯಿ ಎಂಟರ್‌ಪ್ರೈಸಸ್ ಮೂಲಕ ಖರೀಧಿಸಿ ಸರ್ಕಾರಕ್ಕೆ ಹೆಚ್ಚಿನ ಹಣಕ್ಕೆ ಮಾರಾಟ ಮಾಡಿ ಹಣ ಮಾಡುವ ಯೋಜನೆಯನ್ನು ಹಾಕಿದ್ದಾರೆ. ಪ್ರಸ್ತುತ ರೈತರಿಂದ ಪಡೆದ ಹಣವನ್ನು ಮಾತ್ರ ಅವರು ತೆಗೆದುಕೊಂಡು ಸರ್ಕಾರದಿಂದ ಹೆಚ್ಚುವರಿಯಾಗಿ ಬರುವ ಹಣವನ್ನು ರೈತರಿಗೆ ಹಂಚಬೇಕು.

ಇದೆಲ್ಲವೂ ಸುಳ್ಳು ಎಂದು ಪ್ರಮಾಣ ಮಾಡಲಿ, ನಾವು ಪ್ರಮಾಣ ಮಾಡುತ್ತೇನೆ ಎಂದು ಸವಾಲ್ ಹಾಕಿ ಇವೆಲ್ಲವನ್ನೂ ಆದಷ್ಟು ಬೇಗ ಸರಿಪಡಿಸಲಿ, ಇಲ್ಲದಿದ್ದರೆ, ಇದೇ ತಿಂಗಳ 19 ರಂದು ಬೃಹತ್ ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಸಿದರು. ಜನತೆ ನನಗೆ ಶಾಸಕನಾಗಲು ಅವಕಾಶ ನೀಡಿದರೆ ಇಲ್ಲಿ ಒಂದು ಗುಂಟೆ ಜಮೀನನ್ನು ಸಹ ಖರೀಧಿಸುವುದಿಲ್ಲ ವೆಂಕಟರಮಣಸ್ವಾಮಿ ದೇವರ ಮೇಲೆ ಪ್ರಮಾಣ ಮಾಡುತ್ತೇನೆ ಎಂದರು. ಕ್ಷೇತ್ರದಲ್ಲಿ ಅಭಿವೃದ್ಧಿ ಶೂನ್ಯವಾಗಿದೆ. ನಾನು ಇಲ್ಲೇ ಹುಟ್ಟಿ ಬೆಳೆದಿದ್ದೇನೆ ಇಲ್ಲೇ ಜನಸೇವೆ ಮಾಡುತ್ತೇನೆ.

ಇಲ್ಲಿ ಬ್ಯುಸಿನೆಸ್ ಮಾಡಲು ಬಂದಿಲ್ಲ. 3 ತಾಲ್ಲೂಕುಗಳಲ್ಲಿ ಜನರಿಗೆ ಅನುಕೂಲವಾಗುವಂತೆ ಹೆಲ್ಪ್ ಡೆಸ್ಕಗಳನ್ನು ಪ್ರಾರಂಭಿಸುತ್ತಿದ್ದೇನೆ. ಬಡಬಗ್ಗರಿಗೆ ಕೆಲಸ ಕಾರ್ಯಗಳನ್ನು ನಮ್ಮ ಟ್ರಸ್ಟ್ ಮೂಲಕ ಮಾಡಿಕೊಡುತ್ತೇನೆ ಎಂದರು. ಪುರಸಭೆ ಮಾಜಿ ಸದಸ್ಯ ಅ.ನ.ಮೂರ್ತಿ ಮಾತನಾಡಿ, ಬಾಗೇಪಲ್ಲಿ ಕ್ಷೇತ್ರ ಅಭಿವೃದ್ಧಿಶೂನ್ಯವಾಗಿದೆ, ರೈತರಿಗೆ, ವಿದ್ಯಾರ್ಥಿಗಳ, ಜನಸಾಮಾನ್ಯರ ಸಮಸ್ಯೆಗಳು ಪರಿಹಾರ ಕಾಣದೆ ನೆನೆಗುದಿಗೆ ಬಿದ್ದಿವೆ, ಸುಮಾರು 13 ವರ್ಷಗಳಿಂದ ಈ ಭಾಗವನ್ನು ಆಳುತ್ತಿರುವ ಶಾಸಕ ಸುಬ್ಬಾರೆಡ್ಡಿಯವರು, ನಿವೇಶನ ರಹಿತರಿಗೆ ಖಾಲಿ ನಿವೇಶನಗಳನ್ನು ವಿತರಿಸಿಲ್ಲ.

ಎನ್. ಸಂಪಂಗಿಯವರು ಶಾಸಕರಾಗಿದ್ದಾಗ ಪ್ರಾರಂಭವಾದ ಯು.ಜಿ.ಡಿ. ಪಟ್ಟಣದಲ್ಲಿ ಸುಮಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಕಾಮಗಾರಿಗಳು ನಡೆಯದೆ ಅಭಿವೃದ್ಧಿಶೂನ್ಯವಾಗಿದೆ, ಶಾಸಕರೆ ತಾವು ಅಭಿವೃದ್ಧಿ ಮಾಡಲು ಸಾಧ್ಯವಾಗದಿದ್ದರೆ, ಶಾಸಕ ಸ್ಥಾನದಿಂದ ನಿರ್ಗಮಿಸಿ, ಆರಾಮಗಿ ಬಿಸಿನೆಸ್ ಮಾಡಿಕೊಂಡು ಹೋಗಿ ಎಂದು ಟೀಕಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಜೆ.ಪಿ. ಚಂದ್ರಶೇಖರರೆಡ್ಡಿ, ಮಿಟ್ಟೇಮರಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಎಂಬಿ.ಲಕ್ಷ್ಮೀನರಸಿಂಹಯ್ಯ, ಲಕ್ಷ್ಮೀನಾರಾಯಣ, ಕೆ.ಟಿ. ವೀರಾಂಜನೇಯ, ಮಲ್ಲಿಕಾರ್ಜುನ, ಆದಿನಾರಾಯಣಪ್ಪ, ಆನಂದ, ಸುಬ್ರಮಣಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಭಾಗ್ಯನಗರದಲ್ಲಿ ಮೆಗಾ ಮೂಳೆ-ಕೀಲು ಆರೋಗ್ಯ ಶಿಬಿರ 300ಕ್ಕೂ ಹೆಚ್ಚು ಮಂದಿಗೆ ಉಚಿತ ಚಿಕಿತ್ಸೆ



**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಭಾಗ್ಯನಗರ:** ಪಟ್ಟಣದಲ್ಲಿ ಬೆಂಗಳೂರಿನ ಎಕ್ಸೆಲ್ ಕೇರ್ ಆಸ್ಪತ್ರೆ ವತಿಯಿಂದ ಉಚಿತ ಮೆಗಾ ಮೂಳೆ ಮತ್ತು ಕೀಲು ಆರೈಕೆ ಶಿಬಿರವನ್ನು ಆಯೋಜಿಸಲಾಗಿತ್ತು. ಪಟ್ಟಣದ ಡಾ.ಜಚನಿ ರಸ್ತೆಯಲ್ಲಿರುವ ಶಾಂತಿನಿಕೇತನ್ ಶಾಲೆ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಆರೋಗ್ಯ ಶಿಬಿರವನ್ನು ಬಾಗೇಪಲ್ಲಿ ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು ಗ್ರಾಮೀಣ ಪ್ರದೇಶಗಳಲ್ಲಿ ಉತ್ತಮ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ಇಂತಹ ಉಚಿತ ಆರೋಗ್ಯ ಶಿಬಿರಗಳು ಅತ್ಯಗತ್ಯ ವಿಶೇಷವಾಗಿ ಫ್ಲೋರೋಸಿಸ್ ಸಮಸ್ಯೆಯಿಂದಾಗಿ ಅನೇಕರು ಮೂಳೆ ಸಂಬಂದಿತ ಕಾಯಿಲೆಗಳನ್ನು ಎದುರಿಸುತ್ತಿದ್ದಾರೆ.

ಈಗ ತಾಲ್ಲೂಕಿನಲ್ಲಿ ಫ್ಲೋರೋಸಿಸ್ ಸಮಸ್ಯೆ ಕಡಿಮೆಯಾಗುತ್ತಿದೆ ಎಂದು ಹೇಳಿದರು. ನನ್ನ ಗೃಹ ಕಚೇರಿಯಲ್ಲಿ ಪ್ರತಿ ಬುಧವಾರ ನಡೆಸುವ ಜನತಾ ದರ್ಶನ ಕಾರ್ಯಕ್ರಮದಲ್ಲಿ ನೂರಾರು ಬಡವರು ತಮ್ಮ ಆರೋಗ್ಯ ಸಮಸ್ಯೆಗಳನ್ನು ಹೊತ್ತು ಬರುತ್ತಿದ್ದು, ಅವರಿಗೆ ಉಚಿತವಾಗಿ ನನ್ನ ಚಾರಿಟಬಲ್ ಟ್ರಸ್ಟ್ ವತಿಯಿಂದ ಚಿಕಿತ್ಸೆಯನ್ನು ದೊರಕಿಸಿಕೊಡಲಾಗುತ್ತಿದೆ ಎಂದ ಅವರು ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಗುಣಮಟ್ಟದ ವೈದ್ಯಕೀಯ ಸೇವೆ ತಲುಪಿಸುವುದು ಸರ್ಕಾರದ ಆದ್ಯತೆಯಾಗಿದೆ ಎಂದು ತಿಳಿಸಿದ ಶಾಸಕರು ಬಾಗೇಪಲ್ಲಿಯ ಯುವ ಆರ್ಥೋಪೆಡಿಕ್ ಸರ್ಜನ್ ಡಾ.ಸಮೀರ್ ನೇತೃತ್ವದಲ್ಲಿ ಈ ಉಚಿತ ಆರೋಗ್ಯ ಶಿಬಿರ ಆಯೋಜಿಸಿರುವುದು ಹೆಚ್ಚು ಉಪಯುಕ್ತವಾಗಿದೆ ಎಂದರು.

ಶಿಬಿರದಲ್ಲಿ 300ಕ್ಕೂ ಹೆಚ್ಚು ರೋಗಿಗಳಿಗೆ ಉಚಿತ ಮೂಳೆ ಮತ್ತು ಕೀಲು ತಪಾಸಣೆ ಹಾಗೂ ಆರೈಕೆ ಮಾಡಲಾಯಿತು. ಉಚಿತವಾಗಿ ಔಷಧಿಗಳ ಕಿಟ್ಟುಗಳನ್ನು ವಿತರಿಸಲಾಯಿತು ಮತ್ತು ರೋಗಿಗಳಿಗೆ ಬೋನ್ ಡೆನ್ಸಿಟಿ ಪರೀಕ್ಷೆ ನಡೆಸಲಾಯಿತು. ಇದರ ಜೊತೆಗೆ ಸಾಮಾನ್ಯ ಪರೀಕ್ಷೆಗಳನ್ನು ಮಾಡಲಾಯಿತು.

ಈ ಸಂದರ್ಭದಲ್ಲಿ ಶಿಬಿರದ ನೇತೃತ್ವ ವಹಿಸಿದ್ದ ಡಾ.ಸಮೀರ್ ಕೆ.ಎಸ್ ಮಾತನಾಡಿ, ರೋಗಿಗಳ ಆರೋಗ್ಯ ತಪಾಸಣೆ ಸಂದರ್ಭದಲ್ಲಿ ಶೇ. 30-40 ರೋಗಿಗಳಲ್ಲಿ ಮೂಳೆ ಸವೆತ ಮತ್ತು ಮೊಣಕಾಲು ಸಮಸ್ಯೆ ಪತ್ತೆಯಾಗಿದೆ. ಹಿರಿಯ ವಯಸ್ಸಿನ ರೋಗಿಗಳಲ್ಲಿ ಈ ಸಮಸ್ಯೆ ಹೆಚ್ಚಾಗಿ ಕಂಡುಬಂದಿದ್ದು ನೀರಿನಲ್ಲಿ ಅಧಿಕ ಪ್ರಮಾಣದ ಫ್ಲೋರೈಡ್ ಅಂಶ ಈ ಹಿಂದೆ ಇದ್ದುದು ಕಾರಣವಾಗಿದೆ. ಅವಶ್ಯಕತೆ ಇರುವವರಿಗೆ ಮುಂದಿನ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ ಕ್ರಮಗಳ ಬಗ್ಗೆ ಮಾಹಿತಿ ನೀಡಲಾಯಿತು ಮತ್ತು ರೋಗಿಗಳಿಗೆ ಅವರ ಸಮಸ್ಯೆಗಳಿಗೆ ಅನುಗುಣವಾಗಿ ವೈದ್ಯಕೀಯ ಸಲಹೆ ನೀಡಲಾಯಿತು ಎಂದರು.

ಈ ಸಂದರ್ಭದಲ್ಲಿ ತಜ್ಞ ವೈದ್ಯರಾದ ಡಾ. ಅಕ್ಷಯ್ ದಂಡಾ, ಡಾ. ಭರತ್ ಸುರೇಶ್, ಡಾ. ಫಹೀಮ್ ಬಾಷ ಎಸ್, ಡಾ. ಆವಿಶಾ, ಶಾಂತಿನಿಕೇತನ್ ಶಾಲೆಯ ಆಡಳಿತಾಧಿಕಾರಿ ಡಿ.ಎನ್.ರಘುನಾಥ್, ಮುಖ್ಯ ಶಿಕ್ಷಕ ನವೀನ್, ನಿವೃತ್ತ ಪಿಡಿಓ ಕೆ.ಎಸ್.ಸುಭಾನ್, ಬಿ.ಎನ್. ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

# ಚಿಂತಾಮಣಿ ನರಸಿಂಹ ಪೇಟೆಯಲ್ಲಿ ಅ.9ರಿಂದ ಅದ್ದೂರಿ ನವರಾತ್ರಿ ಗಣೇಶೋತ್ಸವ



**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಂತಾಮಣಿ:** ಚಿಂತಾಮಣಿ ನಗರದ ವಾರ್ಡ್ ನಂ.24ರ. ನರಸಿಂಹ ಪೇಟೆಯಲ್ಲಿನ ಯುವಕರ ಬಳಗದಿಂದ ಅಕ್ಟೋಬರ್ 9 ರಿಂದ ದುರ್ಗಾ ಮಾತಾ ದೇವಿ ಹಾಗೂ ಗಣೇಶನ ವಿಗ್ರಹ ಪ್ರತಿಷ್ಠಾಪನೆ ಮತ್ತು ನವರಾತ್ರಿ ಉತ್ಸವವನ್ನು ಅದ್ದೂರಿಯಾಗಿ ಆಚರಣೆ ಮಾಡಲಾಗುತ್ತಿದ್ದು, ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ನಾರಸಿಂಹಪೇಟೆಯ ಯುವ ಮುಖಂಡ ಶ್ರೀನಿವಾಸ್ ರವರು ಮನವಿ ಮಾಡಿದ್ದಾರೆ.

ನರಸಿಂಹಪೇಟೆಯಲ್ಲಿ ಯುವಕರ ಬಳಗದಿಂದ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಯುವ ಮುಖಂಡ ಶ್ರೀನಿವಾಸ್ ಮಾತನಾಡಿ ಕಳೆದ 35 ವರ್ಷಗಳಿಂದ ಗಣೇಶೋತ್ಸವ ಹಾಗೂ 7 ವಷಗಳಿಂದ ಸತತವಾಗಿ ನವರಾತ್ರಿ ದುರ್ಗಾ ಮಾತಾ ದೇವಿಯ ಉತ್ಸವವನ್ನು 9 ದಿನಗಳ ಕಾಲ ವಿಶೇಷ ಪೂಜಾ ಕೈಂಕರ್ಯಗಳೊಂದಿಗೆ ನೆರವೇರಿಸಿಕೊಂಡು ಬರಲಾಗುತ್ತಿದೆ. ಈ ಬಾರಿಯೂ ಹೈದರಾಬಾದ್‌ನಿಂದ ತರಿಸಲಾಗಿರುವ ದುರ್ಗಾ ಮಾತಾ ಹಾಗೂ ಗಣೇಶನ ವಿಗ್ರಹಗಳನ್ನು ಸಂಜೆ 7 ಗಂಟೆಗೆ ವಿದ್ಯುತ್

ದೀಪಾಲಂಕಾರ ಮತ್ತು ಶಬ್ದಗ್ರಹಣದೊಂದಿಗೆ ಭವ್ಯವಾಗಿ ಬರಮಾಡಿಕೊಳ್ಳಲಾಗುತ್ತದೆ.

ಅಕ್ಟೋಬರ್ 09 ರಿಂದ 20 ರವರೆಗೆ ಒಂಬತ್ತು ದಿನಗಳ ಕಾಲ ದುರ್ಗಾದೇವಿ ಮತ್ತು ಗಣೇಶನಿಗೆ ನಿತ್ಯವೂ ವಿಶೇಷ ಪೂಜೆ, ಹೋಮ-ಹವನಗಳು ಹಾಗೂ ಪ್ರತಿದಿನ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಅಕ್ಟೋಬರ್ 9 ರಂದು ಉದ್ಘಾಟನಾ ಕಾರ್ಯಕ್ರಮದಲ್ಲಿ ಚಿಕ್ಕಬಳ್ಳಾಪುರ ಸಂಸದ ಡಾ.ಕೆ.ಸುಧಾಕರ್, ಸಮಾಜ ಸೇವಕ ವೇಣುಗೋಪಾಲ್ ಹಾಗೂ ಅಕ್ಟೋಬರ್ 17 ರ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಮಾಜಿ ಶಾಸಕ ಜೆ.ಕೆ. ಕೃಷ್ಣಾರೆಡ್ಡಿ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ. ಉತ್ಸವದ ಕೊನೆಯಲ್ಲಿ ಡೊಳ್ಳು ಕುಣಿತ ಸೇರಿದಂತೆ ಹಲವು ಕಲಾತಂಡಗಳ ಮೆರವಣಿಗೆಯೊಂದಿಗೆ ನಗರದ ಪ್ರಮುಖ ರಾಜಬೀದಿಗಳಾದ ನರಸಿಂಹ ಪೇಟೆ, ಎಂ.ಜಿ. ರೋಡ್ ಮಾರ್ಗವಾಗಿ ಕನ್ನಂಪಲ್ಲಿ ಓಟಿ ಕೆರೆಯಲ್ಲಿ ದೇವರ ವಿಗ್ರಹಗಳ ವಿಸರ್ಜನೆ ನಡೆಯಲಿದೆ.

ನಾಡಿನಲ್ಲಿ ಉತ್ತಮ ಮಳೆ-ಬೆಳೆಯಾಗಲಿ ಎಂದು ಪ್ರಾರ್ಥಿಸಿ ಈ ಪೂಜೆ ಹಮ್ಮಿಕೊಳ್ಳಲಾಗಿದ್ದು, ಚಿಂತಾಮಣಿ ತಾಲೂಕಿನ ಎಲ್ಲಾ ಸಾರ್ವಜನಿಕರು ಹಾಗೂ ಭಕ್ತಾದಿಗಳು ಆಗಮಿಸಿ ದೇವಿಯ ಕೃಪೆಗೆ ಪಾತ್ರರಾಗಬೇಕು ಎಂದು ಕೋರಿದರು. ಈ ಸಂದರ್ಭದಲ್ಲಿ ಯುವಕರ ಬಳಗದ ಮುಖಂಡರಾದ ಶ್ರೀನಿ ವಾಸ್, ಸಂತೋಷ, ಪ್ರಶಾಂತ್, ವೇಣು, ಪವನ್ ಇದ್ದರು.

# ವಸತಿ ಶಾಲೆಗಳ ನೋಂದಣಿಗೆ ಅರ್ಜಿ ಆಹ್ವಾನ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಕ್ಕಬಳ್ಳಾಪುರ:** ಜಿಲ್ಲೆಯಲ್ಲಿ ಇರುವ 6 ರಿಂದ 18 ವರ್ಷದೊಳಗಿನ ಮಕ್ಕಳಿಗಾಗಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಸರ್ಕಾರೇತರ ನಾಗರೀಕ ಸಮಾಜ ಸಂಸ್ಥೆಗಳು ಟ್ರಸ್ಟ್

ಧಾರ್ಮಿಕ ಖಾಸಗಿ ಅಥವಾ ವೈಯಕ್ತಿಕವಾಗಿ ನಡೆಸಲ್ಪಡುವ ಯಾವುದೇ ಔಪಚಾರಿಕ ಅನೌಪಚಾರಿಕ ಶೈಕ್ಷಣಿಕ ವಸತಿ ನಿಲಯಗಳಗಳನ್ನು, ಸರ್ಕಾರದ ಆದೇಶದನ್ವಯ ವಸತಿ ನಿಲಯಗಳ ಮಾರ್ಗಸೂಚಿಯನ್ವಯ ಸದರಿ ಮಾರ್ಗಸೂಚಿಗಳು ಜಾರಿಯಾದ ದಿನಾಂಕದಿಂದ 06 ತಿಂಗಳ ಒಳಗಾಗಿ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸಬೇಕಾಗಿರುವುದು ಕಡ್ಡಾಯವಾಗಿರುತ್ತದೆ. ಆದ್ದರಿಂದ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ ಕಾಲೇಜು, ವಸತಿ ನಿಲಯ, ತರಬೇತಿ ನಿಲಯಗಳು ಮತ್ತು ದಾರ್ಮಿಕ ಶಿಕ್ಷಣ ಸಂಸ್ಥೆಗಳು ಸದರಿ ಮಾರ್ಗಸೂಚಿಗಳನ್ವಯ ನೋಂದಣಿಗಾಗಿ ಜಾಲತಾಣದಲ್ಲಿ ನವೆಂಬರ್ 06 ರೊಳಗಾಗಿ ಅರ್ಜಿಯನ್ನು ಸಲ್ಲಿಸಲು ಅವಕಾಶ ಕಲ್ಪಿಸಿದೆ. ಸಂಬಂಧಿಸಿದ ಸಂಸ್ಥೆಗಳು ಅರ್ಜಿಯನ್ನು ಸಲ್ಲಿಸುವಂತೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಥವಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ದೂರವಾಣಿ ಸಂಖ್ಯೆ: 9964411334,7795520866, ಮೂಲಕವಾಗಿ ಅಥವಾ ಉಪನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾಡಳಿತ ಭವನ, 1ನೇ ಮಹಡಿ, ಕೊಠಡಿ ಸಂಖ್ಯೆ:ಎಫ್‌ಬಿ-05, ಚಿಕ್ಕಬಳ್ಳಾಪುರ ಇಲ್ಲಿ ಸಂಪರ್ಕಿಸಬಹುದು ಎಂದು ಜಿಲ್ಲಾಧಿಕಾರಿ ಜಿ.ಪ್ರಭು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by PRABHAKR G., Printed at M/s. SAI PRINTS, # 8, Subramanya Lane, Cottonpet, Bengaluru, Karnataka - 560053
Published by Smt. LAKSHMINARASAMMA, Owned by Smt. LAKSHMINARASAMMA,
Published at : Varalakonda Village, Somenahalli Hobli, Gudibande Taluk, Chikkaballapur Dist-562104, Karnataka. Editor SHIVAKUMAR K. Mobile: 8147582389 / 9743641515